Visit to Karnataka Help.in

**1.** ಸಬಾಲ್ಟರ್ನ್ ದೃಷ್ಟಿಕೋನವು

(1) ಇದು ಸಾಮಾನ್ಯವಾಗಿ ಪ್ರತಿನಿಧಿಸದ ಜನಸಾಮಾನ್ಯರ ದೃಷ್ಟಿಕೋನದ ಮೂಲಕ ಸಮಾಜದ ಪರ್ಯಾಯ ಚಿತ್ರಣವನ್ನು ಪ್ರಸ್ತುತಪಡಿಸಲು ಪ್ರಯತ್ನಿಸುತ್ತದೆ.

(2) ರಾಜಕೀಯ ಮತ್ತು ಸಾಮಾಜಿಕ ಚಳುವಳಿಗಳಲ್ಲಿ ಗಣ್ಯರ ವಿರುದ್ಧವಾಗಿ ಜನಸಾಮಾನ್ಯರ ಪಾತ್ರವನ್ನು ಎತ್ತಿ ತೋರಿಸುವ ಮೂಲಕ ಸಮತೋಲನವನ್ನು ಪುನಃಸ್ಥಾಪಿಸಲು ಪ್ರಯತ್ನಿಸುತ್ತದೆ.

(3) ಇದು ರೈತರು, ಬುಡಕಟ್ಟು ಮತ್ತು ಸಮಾಜದ ಇತರ ಅಂಚಿನಲ್ಲಿರುವ ವರ್ಗಗಳನ್ನು ತಮ್ಮದೇ ಆದ ಇತಿಹಾಸದ ನಿರ್ಮಾತೃಗಳಂತೆ ಪರಿಗಣಿಸುತ್ತದೆ.

(4) ಮೇಲಿನ ಎಲ್ಲವೂ

**2.** ಎಥ್ನೋಸೆಂಟ್ರಿಸಂ ಪರಿಕಲ್ಪನೆಯು

(1) ನಿಮ್ಮ ಸ್ವಂತ ಸಂಸ್ಕೃತಿಯನ್ನು ಬಿಟ್ಟುಕೊಡುವುದು.

(2) ಸ್ವಂತ ಸಂಸ್ಕೃತಿಯ ನೆಲೆಯಲ್ಲಿ ಇತರರ ಸಂಸ್ಕೃತಿಗಳನ್ನು ಮೌಲ್ಯಮಾಪನ ಮಾಡುವುದು.

(3) ಬೇರೊಬ್ಬರ ಸಂಸ್ಕೃತಿಯಲ್ಲಿ ಸ್ವಾಂಗೀಕರಣ ಹೊಂದುವುದು.

(4) ಹೊಸ ಧರ್ಮದ ಬಗ್ಗೆ ಕಲಿಯುವುದು.

**3.** ಸ್ಟೀಫನ್ ಹಾಕಿಂಗ್ ಅವರು ಈ ಕ್ಷೇತ್ರದಲ್ಲಿನ ತಮ್ಮ ಕೆಲಸಗಳಿಂದ ಪ್ರಸಿದ್ಧರಾಗಿದ್ದಾರೆ

(1) ಸಾಪೇಕ್ಷತೆಯ ಸಾಮಾನ್ಯ ಸಿದ್ಧಾಂತ

(2) ಕ್ವಾಂಟಮ್ ಸಿದ್ಧಾಂತ

(3) ವೈಟ್ ಡ್ವಾರ್ಫ್‌ಗಳು

(4) ಕಪ್ಪು ರಂಧ್ರಗಳು

**4.** ಓರಾನ್, ಮುಂಡಾ, ಸಂತಾಲ್ ಬುಡಕಟ್ಟು ಸಮೂಹಗಳು ಮುಖ್ಯವಾಗಿ ಯಾವ ರಾಜ್ಯದಲ್ಲಿ ಕಂಡುಬರುತ್ತವೆ?

(1) ಅಸ್ಸಾಂ

(2) ಮಧ್ಯಪ್ರದೇಶ

(3) ಜಾರ್ಖಂಡ್

(4) ಛತ್ತೀಸ್‌ಗಢ

**5.** ***ಪಟ್ಟಿ—I*** ನ್ನು ***ಪಟ್ಟಿ—II*** ರೊಂದಿಗೆ ಹೊಂದಿಸಿ:

| ***ಪಟ್ಟಿ—I*** | ***ಪಟ್ಟಿ—II*** |
|---|---|
| A. ಜಿ.ಎಸ್. ಘುರ್ರೆ | I. ಹಿಂದೂ ಸೊಸೈಟಿ : ಆ್ಯನ್ ಇಂಟರ್ ಪ್ರಿಟೇಶನ್ |
| B. ಎಂ.ಎನ್. ಶ್ರೀನಿವಾಸ್ | II. ರೂರಲ್ ಇಂಡಿಯಾ ಇನ್ ಟ್ರಾನ್ಸಿಶನ್ |
| C. ಐರಾವತಿ ಕರ್ವೆ | III. ಸೋಶಿಯಲ್ ಚೇಂಜ್ ಇನ್ ಮಾಡ್ರರ್ನ್ ಇಂಡಿಯಾ |
| D. ಎ.ಆರ್. ದೇಸಾಯಿ | IV. ಕ್ಯಾಸ್ಟ್ ಅಂಡ್ ರೇಸ್ ಇನ್ ಇಂಡಿಯಾ |

ಕೆಳಗೆ ನೀಡಿರುವ ಆಯ್ಕೆಗಳಿಂದ **ಸರಿಯಾದ** ಉತ್ತರವನ್ನು ಆರಿಸಿ :

| | A | B | C | D |
|---|---|---|---|---|
| (1) | IV | III | I | II |
| (2) | I | IV | III | II |
| (3) | III | II | IV | I |
| (4) | II | I | IV | III |

**Visit to Karnataka Help.in**

6. *ಪಟ್ಟಿ—I* ನ್ನು *ಪಟ್ಟಿ—II* ರೊಂದಿಗೆ ಹೊಂದಿಸಿ:

| *ಪಟ್ಟಿ—I* | *ಪಟ್ಟಿ—II* |
|---|---|
| A. ರಾಜಾ ರಾಮ್ ಮೋಹನ್ ರಾಯ್ | I. ಬಾಲಕಿಯರ ಮೊದಲ ಶಾಲೆಯನ್ನು ಸ್ಥಾಪಿಸಿದರು |
| B. ಈಶ್ವರ ಚಂದ್ರ ವಿದ್ಯಾಸಾಗರ್ | II. ವಿಧವಾ ಪುನರ್ವಿವಾಹ |
| C. ಸಾವಿತ್ರಿಬಾಯಿ ಫುಲೆ | III. ಆರ್ಯ ಸಮಾಜವನ್ನು ಸ್ಥಾಪಿಸಿದರು |
| D. ದಯಾನಂದ ಸರಸ್ವತಿ | IV. ಸತಿ ಪದ್ಧತಿಯ ನಿರ್ಮೂಲನೆ |

ಕೆಳಗೆ ನೀಡಿರುವ ಆಯ್ಕೆಗಳಿಂದ **ಸರಿಯಾದ** ಉತ್ತರವನ್ನು ಆರಿಸಿ :

| | A | B | C | D |
|---|---|---|---|---|
| (1) | II | IV | III | I |
| (2) | IV | II | I | III |
| (3) | I | IV | II | III |
| (4) | II | I | III | IV |

7. "ಉಪನಿಷತ್ತುಗಳನ್ನು ಬೆಳಗಿನ ಸೂರ್ಯಪ್ರಭೆಗೆ, ಪರ್ವತಗಳ ಮೇಲಣ ಶುದ್ಧ ಮಾರುತಕ್ಕೆ ಹೋಲಿಸಿ. ಅವು ಸರಳವೂ ಆದರೆ ಗಹನವೂ, ಪರಿಶುದ್ಧವೂ ಮತ್ತು ಸತ್ಯವೂ ಆಗಿವೆ." ಇದು ಯಾರ ಹೇಳಿಕೆ?

(1) ಮ್ಯಾಕ್ಸ್ ಮುಲ್ಲರ್

(2) ಕಾರ್ಲ್ ಮಾರ್ಕ್ಸ್

(3) ಹೆಗೆಲ್

(4) ಮೇಲಿನ ಯಾವುದೂ ಅಲ್ಲ

8. "ಅವಿಭಕ್ತ ಕುಟುಂಬ, ಜಾತಿ ಮತ್ತು ಗ್ರಾಮ ಸಮುದಾಯಗಳು ಭಾರತದ ಗ್ರಾಮೀಣ ಸಮಾಜದ ಮೂರು ಆಧಾರ ಸ್ತಂಭಗಳಾಗಿವೆ." ಇದು ಯಾರ ಹೇಳಿಕೆ?

(1) ಆರ್.ಎನ್. ಶರ್ಮಾ

(2) ಡಾ. ಐರಾವತಿ ಕರ್ವೆ

(3) ಕೆ.ಎಂ. ಕಪಾಡಿಯಾ

(4) ಕೆ. ಡೇವಿಸ್

9. *ಪಟ್ಟಿ—I* ನ್ನು *ಪಟ್ಟಿ—II* ರೊಂದಿಗೆ ಹೊಂದಿಸಿ:

| *ಪಟ್ಟಿ—I* | *ಪಟ್ಟಿ—II* |
|---|---|
| A. ಪುರುಷಾರ್ಥಗಳು | I. ವಿಶ್ರಾಂತಿಯ ತಾಣ |
| B. ಆಶ್ರಮಗಳು | II. ಜೀವನದ ಉದ್ದೇಶಗಳು |
| C. ವರ್ಣಗಳು | III. ಬುದ್ಧಿವಂತಿಕೆ, ಜ್ಞಾನ |
| D. ವೇದಗಳು | IV. ಬಣ್ಣ |
| | V. ಹತ್ತಿರ ಕುಳಿತುಕೊಳ್ಳುವುದು |

ಕೆಳಗೆ ನೀಡಿರುವ ಆಯ್ಕೆಗಳಿಂದ **ಸರಿಯಾದ** ಉತ್ತರವನ್ನು ಆರಿಸಿ :

| | A | B | C | D |
|---|---|---|---|---|
| (1) | II | I | IV | III |
| (2) | I | II | III | IV |
| (3) | III | IV | I | II |
| (4) | I | II | IV | III |

10. ಅನುಶೀಲನ ಸಮಿತಿ ಮತ್ತು ಯುಗಾಂತರಗಳು ದೀರ್ಘ ಕಾಲದವರೆಗೆ ______ ಆಗಿದ್ದವು.

(1) ಸಾಮಾಜಿಕ ಸಂಘಟನೆಗಳು

(2) ಕ್ರಾಂತಿಕಾರಕ ಸೊಸೈಟಿಗಳು

(3) ಧಾರ್ಮಿಕ ಗುಂಪುಗಳು

(4) ಮೇಲಿನ ಯಾವುದೂ ಅಲ್ಲ

Visit to Karnataka Help.in

**11.** ಕ್ರಾಂತಿಕಾರರಾದ ಅಶ್ಫಖುಲಾಹ್ ಖಾನ್, ರಾಂಪ್ರಸಾದ್ ಬಿಸ್ಮಿಲ್, ರೋಶನ್ ಸಿಂಗ್ ಮತ್ತು ರಾಜೇಂದ್ರ ಲಾಹಿರಿ - ಇವರನ್ನು ಯಾವ ಕಾರಣಕ್ಕಾಗಿ ಗಲ್ಲಿಗೇರಿಸಲಾಯಿತು?

(1) ಗವರ್ನರ್ ಜನರಲ್‌ನನ್ನು ಕೊಲ್ಲುವ ಪ್ರಯತ್ನ

(2) ಅಸೆಂಬ್ಲಿಯಲ್ಲಿ ಬಾಂಬ್ ಎಸೆತ

(3) 1925ರ ಆಗಸ್ಟ್ 9ರಂದು ಕಾಕೋರಿ ರೈಲಿನಲ್ಲಿ ಹಣವನ್ನು ಲೂಟಿ ಮಾಡಿದ ಪ್ರಕರಣ

(4) ಮೇಲಿನ ಯಾವುದೂ ಅಲ್ಲ

**12.** ಖುದಾಯಿ ಖಿದ್ಮತ್‌ಗರ್‌ಅನ್ನು ಯಾರು ಸ್ಥಾಪಿಸಿದರು?

(1) ಖಾನ್ ಅಬ್ದುಲ್ ಗಫಾರ್ ಖಾನ್

(2) ಮೌಲಾನಾ ಮಹಮ್ಮದ್ ಅಲಿ

(3) ಆಘಾ ಖಾನ್

(4) ಮೇಲಿನ ಯಾರೂ ಅಲ್ಲ

**13.** ರಾಜಕೀಯವನ್ನು ಕುರಿತ ಪ್ರಾಚೀನ ಪುಸ್ತಕ 'ನೀತಿಸಾರ'ವನ್ನು ಯಾರು ರಚಿಸಿದ್ದರು?

(1) ಕೌಟಿಲ್ಯ

(2) ಕಮಂಡಕ

(3) ಚರಕ

(4) ಮೇಲಿನ ಯಾರೂ ಅಲ್ಲ

**14.** ಸಾಮ್ರಾಟನೆಂಬ ಚಕ್ರಾಧಿಪತ್ಯದ ಬಿರುದನ್ನು ಹೊಂದಿದ ವಾಕಾಟಕದ ಏಕೈಕ ರಾಜನಾಗಿದ್ದವನು

(1) ಪ್ರವರಸೇನ-I

(2) ಹರಿಸೇನ

(3) ವಿಂಧ್ಯಾಶಕ್ತಿ

(4) ರುದ್ರಸೇನ

**15.** IIನೇ ಚಂದ್ರಗುಪ್ತನ ಕಾಲಘಟ್ಟದಲ್ಲಿ ಈ ಕೆಳಕಂಡ ಯಾವ ಶಿಲಾಶಾಸನಗಳಲ್ಲಿ ಗ್ರಾಮನಿಕಾಯ ಸ್ಥಾನವನ್ನು ಹೊಂದಿರಬಹುದಾದ ಪಂಚಮಂಡಳಿಯ ಕುರಿತು ಉಲ್ಲೇಖಿಸಲಾಗಿದೆ?

(1) ಗರುಡಸ್ತಂಭ ಶಾಸನ

(2) ಸಾಂಚಿ ಶಾಸನ

(3) ಉದಯಗಿರಿ ಗುಹಾ ಶಾಸನ

(4) ಮೇಲಿನ ಯಾವುದೂ ಅಲ್ಲ

**16.** ಈ ಕೆಳಕಂಡವುಗಳಲ್ಲಿ ಯಾವುದು ಭಾರತದಲ್ಲಿ ಮೊದಲು ಇಟ್ಟಿಗೆಯಿಂದ ಕಟ್ಟಿದ ದೇವಾಲಯವಾಗಿದೆ?

(1) ಸಿರ್‌ಪುರ ದೇವಾಲಯ

(2) ದೇವ್‌ಗರ್ ದೇವಾಲಯ

(3) ಭಿತರ್‌ಗಾಂವ್ ದೇವಾಲಯ

(4) ಮೇಲಿನ ಯಾವುದೂ ಅಲ್ಲ

17. 1580ರಲ್ಲಿ ಅಕ್ಬರನು ತನ್ನ ಸಾಮ್ರಾಜ್ಯವನ್ನು ಎಷ್ಟು ಪ್ರಾಂತ್ಯಗಳಾಗಿ ವಿಭಜಿಸಿದನು?

(1) 08 ಪ್ರಾಂತ್ಯಗಳು

(2) 12 ಪ್ರಾಂತ್ಯಗಳು

(3) 15 ಪ್ರಾಂತ್ಯಗಳು

(4) ಮೇಲಿನ ಯಾವುದೂ ಅಲ್ಲ

18. ಭಾರತೀಯ ದಂಡಸಂಹಿತೆಯ ಕರಡು ಪ್ರತಿಯನ್ನು ಯಾರು ಸಿದ್ಧಪಡಿಸಿದರು?

(1) ಲಾರ್ಡ್ ಕ್ಯಾನಿಂಗ್

(2) ಲಾರ್ಡ್ ಚೆಲ್ಮ್ಸ್‌ಫೋರ್ಡ್

(3) ಲಾರ್ಡ್ ಮೆಕಾಲೆ

(4) ಮೇಲಿನ ಯಾರೂ ಅಲ್ಲ

19. ಗ್ರಾಮ ಸಮಿತಿಗಳು ಈ ಕೆಳಕಂಡ ಯಾರ ಆಳ್ವಿಕೆಯಲ್ಲಿನ ರಾಜ ಪರಂಪರೆಯ ಪ್ರಮುಖ ಲಕ್ಷಣವಾಗಿದ್ದವು?

(1) ಚೋಳ

(2) ಚೇರ

(3) ರಾಷ್ಟ್ರಕೂಟರು

(4) ಮೇಲಿನ ಯಾವುದೂ ಅಲ್ಲ

20. 1905ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಬನಾರಸ್ ಅಧಿವೇಶನದ ಸ್ವದೇಶೀ ಕರೆಯನ್ನು ನಡೆಸಿದ್ದು, ಅದರ ಅಧ್ಯಕ್ಷತೆಯನ್ನು ವಹಿಸಿದ್ದವರು

(1) ಜಿ.ಕೆ. ಗೋಖಲೆ

(2) ಬಿ.ಜಿ. ತಿಲಕ್

(3) ಸರ್ ಆಗಾ ಖಾನ್

(4) ಮೇಲಿನ ಯಾರೂ ಅಲ್ಲ

21. ಯುಎಸ್‌ಎಯ ಸ್ಯಾನ್‌ಫ್ರಾನ್ಸಿಸ್ಕೋದಲ್ಲಿ ಘದಾರ್ ಪಕ್ಷವನ್ನು (ನವಂಬರ್, 1913) ಯಾರು ಸ್ಥಾಪಿಸಿದರು?

(1) ಮೇಡಮ್ ಭಿಕಾಜಿ ಕಾಮ

(2) ಲಾಲಾ ಹರ್‌ದಯಾಳ್

(3) ಶ್ಯಾಮ್‌ಜಿ ಕೃಷ್ಣವರ್ಮ

(4) (1) ಮತ್ತು (2) ಎರಡೂ

22. ''ಬೆಂಗಳೂರು'' ಹೆಸರಿನ ಪ್ರಥಮ ಉಲ್ಲೇಖ ಇರುವ ಶಾಸನ ಯಾವ ದೇವಾಲಯದ ಹೊರ ನೆಲಹಾಸಿನಲ್ಲಿತ್ತು?

(1) ಕಮಟೇಶ್ವರ ದೇವಸ್ಥಾನ

(2) ವೇಣುಗೋಪಾಲಸ್ವಾಮಿ ದೇವಸ್ಥಾನ

(3) ವೀರಭದ್ರ ದೇವಸ್ಥಾನ

(4) ಕೋಟೆ ವೆಂಕಟರಮಣ ದೇವಸ್ಥಾನ

Visit to Karnataka Help.in

**23.** ಈ ಕೆಳಕಂಡ ಜೋಡಿಗಳಲ್ಲಿ ಯಾವುದು **ಸರಿಯಾಗಿ** ಹೊಂದಿಕೆಯಾಗುತ್ತದೆ?

(1) ಗಣರಾಜ್ಯ – ರಾಷ್ಟ್ರದ ಮುಖ್ಯಸ್ಥ ರಾಜವಂಶಸ್ಥನಾಗಿರುತ್ತಾನೆ

(2) ಸಾರ್ವಭೌಮ ಪ್ರಭುತ್ವ – ಸಂವಿಧಾನವು ಜನರ ಇಚ್ಛಾನುಸಾರವಾಗಿರುತ್ತದೆ

(3) ಪ್ರಜಾಸತ್ತಾತ್ಮಕ – ಸಂವಿಧಾನವು ಮತ್ತೊಂದು ರಾಷ್ಟ್ರದ ಕಾನೂನು ಸರ್ವೋಚ್ಛತೆಯನ್ನು ಅಂಗೀಕರಿಸುವುದಿಲ್ಲ

(4) ಜಾತ್ಯಾತೀತ – ರಾಷ್ಟ್ರವು ಯಾವುದೇ ಧರ್ಮದ ಕುರಿತು ತಟಸ್ಥವಾಗಿರುತ್ತದೆ

**24.** ಮಂತ್ರಿಗಳನ್ನು ಈ ಕೆಳಕಂಡ ಯಾವುದರಿಂದ ಆಯ್ಕೆ ಮಾಡಿಕೊಳ್ಳಬಹುದು?

(A) ಲೋಕಸಭೆ

(B) ರಾಜ್ಯಸಭೆ

(C) ಶಾಸಕಾಂಗದ ಹೊರಗೆ

**ಸರಿಯಾದ** ಉತ್ತರವನ್ನು ಆಯ್ಕೆಮಾಡಿ :

(1) (A) ಮಾತ್ರ

(2) (B) ಮಾತ್ರ

(3) (A) ಮತ್ತು (B) ಮಾತ್ರ

(4) (A), (B) ಮತ್ತು (C)

**25.** ಭೂಮಿಯ ಅಯಸ್ಕಾಂತೀಯ ಕ್ಷೇತ್ರವು ಯಾವಾಗಲೂ ಕ್ಷಿತಿಜೀಯ ಘಟಕಾಂಶವನ್ನು ಹೊಂದಿರುತ್ತದೆ ______ ಹೊರತುಪಡಿಸಿ.

(1) ಸಮಭಾಜಕ ವೃತ್ತ

(2) ಅಯಸ್ಕಾಂತೀಯ ಧ್ರುವ

(3) 60° ಅಕ್ಷಾಂಶ

(4) 50° ಅಕ್ಷಾಂಶ

**26.** ಈ ಕೆಳಕಂಡ ಪ್ರತಿಪಾದನೆಗಳಲ್ಲಿ ಯಾವ ಒಂದು ಪ್ರತಿಪಾದನೆಯು ಸಂವಿಧಾನದ 356ನೇ ಅನುಚ್ಛೇದದ ಅಡಿಯಲ್ಲಿನ ಭಾರತದ ರಾಷ್ಟ್ರಪತಿಯ ಅಧಿಕಾರಗಳ **ಸರಿಯಾದ** ವಿವರಣೆಯಾಗಿದೆ?

(1) ವಿಧಾನಸಭೆಯ ವಿಶ್ವಾಸಮತದ ಆದೇಶವಿದ್ದರೂ ಮುಖ್ಯಮಂತ್ರಿಯು ಸಂವಿಧಾನಕ್ಕೆ ಅನುಗುಣವಾಗಿ ಸರ್ಕಾರವನ್ನು ನಡೆಸಲು ಸಾಧ್ಯವಾಗದಿದ್ದರೆ ರಾಷ್ಟ್ರಪತಿಯು ತುರ್ತುಪರಿಸ್ಥಿತಿಯನ್ನು ಘೋಷಿಸುತ್ತಾರೆ.

(2) ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟರೆ ರಾಷ್ಟ್ರಪತಿಯು ತುರ್ತುಪರಿಸ್ಥಿತಿಯನ್ನು ಘೋಷಿಸಬಹುದು.

(3) ರಾಷ್ಟ್ರಪತಿಯು ಸರ್ವೋಚ್ಚ ನ್ಯಾಯಾಲಯದ ಸಲಹೆಗಾಗಿ ವಿಷಯವನ್ನು ಕಳುಹಿಸಬಹುದು ಮತ್ತು ಅಂಥ ಸಲಹೆಯನುಸಾರ ಕಾರ್ಯ ನಿರ್ವಹಿಸಬಹುದು.

(4) ರಾಜ್ಯಪಾಲರು ವರದಿಯನ್ನು ಸಲ್ಲಿಸಲು ನಿರಾಕರಿಸಿದರೆ, ರಾಷ್ಟ್ರಪತಿಯು ತುರ್ತು ಪರಿಸ್ಥಿತಿಯನ್ನು ಘೋಷಣೆ ಮಾಡಲಾಗದು.

Visit to Karnataka Help.in

27. ಪ್ರತಿಪಾದನೆ **(A)** : ವಿಧಾನಪರಿಷತ್ತಿನ ಸ್ಥಾನವು ವಿಧಾನಸಭೆಗಿಂತ ಕೆಳಗಿನದಾಗಿದೆ.

**ಕಾರಣ (R1)** : ಪರಿಷತ್ತಿನ ಅಸ್ತಿತ್ವವೇ ವಿಧಾನಸಭೆಯ ಅಪೇಕ್ಷೆಯನ್ನವಲಂಬಿಸಿದೆ.

**ಕಾರಣ (R2)** : ಮೂಲತಃ ಪರಿಷತ್ತಿನಲ್ಲಿ ಮಂಡನೆಯಾಗಿರುವ ಒಂದು ವಿಧೇಯಕವನ್ನು ವಿಧಾನಸಭೆಯು ತಿರಸ್ಕರಿಸಿದ ಕೂಡಲೇ ಅದು ಅಲ್ಲಿಗೆ ಕೊನೆಯಾಗುತ್ತದೆ.

**ಕಾರಣ (R3)** : ರಾಜ್ಯಪಾಲರು ಪರಿಷತ್ತಿನ ಆರನೇ ಒಂದರಷ್ಟು ಸದಸ್ಯರನ್ನು ನಾಮನಿರ್ದೇಶನ ಮಾಡುತ್ತಾರೆ.

(1) **(A), R1, R2** ಮತ್ತು **R3** ಸರಿಯಾಗಿವೆ ಹಾಗೂ **R1, R2** ಮತ್ತು **R3 (A)** ಯನ್ನು ವಿವರಿಸುತ್ತವೆ.

(2) **(A), R1** ಮತ್ತು **R3** ಸರಿಯಾಗಿವೆ ಹಾಗೂ **R1** ಮತ್ತು **R3 (A)** ಯನ್ನು ವಿವರಿಸುತ್ತವೆ.

(3) **(A), R1, R2** ಮತ್ತು **R3** ಸರಿಯಾಗಿವೆ ಆದರೆ ಕೇವಲ **R1** ಮತ್ತು **R2 (A)** ಯನ್ನು ವಿವರಿಸುತ್ತವೆ.

(4) **(A)** ಮತ್ತು **R2** ತಪ್ಪಾಗಿವೆ; **R1** ಮತ್ತು **R3** ಸರಿಯಾಗಿವೆ.

28. ಸಂವಿಧಾನದ ಪ್ರಸ್ತಾವನೆಗೆ ಸಂಬಂಧಿಸಿದ ಹೇಳಿಕೆಗಳನ್ನು ಓದಿಕೊಂಡು, ಒದಗಿಸಲಾದ ಸಂಕೇತಗಳನ್ನು ಬಳಸಿ ನಿಖರವಾದುದು ಯಾವುದೆಂಬುದನ್ನು ಗುರುತಿಸಿ :

(A) ಜವಾಹರ್‌ಲಾಲ್ ನೆಹರು ಪ್ರಸ್ತಾಪಿಸಿದ ನಿರ್ಣಯದ ಉದ್ದೇಶವು ಅಂತಿಮವಾಗಿ ಪ್ರಸ್ತಾವನೆಯಾಯಿತು.

(B) ಇದು ಕಾನೂನಾತ್ಮಕ ಸ್ವರೂಪದ್ದಲ್ಲ.

(C) ಇದನ್ನು ತಿದ್ದುಪಡಿ ಮಾಡಲಾಗದು.

**ಸರಿಯಾದ** ಉತ್ತರವನ್ನು ಆಯ್ಕೆಮಾಡಿ :

(1) (A) ಮತ್ತು (B) ಮಾತ್ರ

(2) (A), (B) ಮತ್ತು (C)

(3) (B) ಮತ್ತು (C) ಮಾತ್ರ

(4) ಮೇಲಿನ ಎಲ್ಲವೂ

29. 1949ರ ನವಂಬರ್ 26ರಂದು ಅಳವಡಿಸಿಕೊಂಡ ಭಾರತ ಸಂವಿಧಾನದ ಪ್ರಸ್ತಾವನೆಯು ಈ ಕೆಳಕಂಡ ಯಾವ ಪದವನ್ನು ಒಳಗೊಂಡಿರಲಿಲ್ಲ?

(A) ಸಮಾಜವಾದಿ

(B) ಸರ್ವಧರ್ಮ ಸಮಭಾವ (Secular)

(C) ಅಖಂಡತೆ

(D) ಗಣರಾಜ್ಯ

ಕೆಳಗೆ ನೀಡಿರುವ ಆಯ್ಕೆಗಳಿಂದ **ಸರಿಯಾದ** ಉತ್ತರವನ್ನು ಆರಿಸಿ :

(1) (A), (B) ಮತ್ತು (C)

(2) (B), (C) ಮತ್ತು (D)

(3) (A), (B) ಮತ್ತು (D)

(4) (C) ಮತ್ತು (D)

30. ಈ ಕೆಳಕಂಡ ಹೇಳಿಕೆಗಳನ್ನು ಪರಿಶೀಲಿಸಿ :

**ಪ್ರತಿಪಾದನೆ (A)** : ಭಾರತದಲ್ಲಿ ನ್ಯಾಯಿಕ ಕ್ರಿಯಾವಾದವು ನ್ಯಾಯಾಲಯದ ತೀರ್ಪುಗಳು ಮತ್ತು ನಿರ್ಣಯಗಳ ಮುಖಾಂತರ ಸಂವಿಧಾನೇತರ ಬೆಳವಣಿಗೆಯಾಗಿ ಹೊರಹೊಮ್ಮಿದೆ.

**ಕಾರಣ (R)** : ಅಸ್ತಿತ್ವದಲ್ಲಿರುವ ಕಾನೂನು ಸ್ಪಷ್ಟವಾಗಿಲ್ಲದಿರುವುದರಿಂದ ಅಥವಾ ವ್ಯಕ್ತವಾಗಿ ಹೇಳದಿರುವುದರಿಂದ ನ್ಯಾಯಿಕ ಕ್ರಿಯಾವಾದವು ಆ ಖಾಲಿ ಅಂತರವನ್ನು ಸೂಕ್ತವಾಗಿ ತುಂಬುತ್ತದೆ.

(1) ಪ್ರತ್ಯೇಕವಾಗಿ **(A)** ಮತ್ತು **(R)** ಎರಡೂ ಸರಿಯಾಗಿವೆ ಮತ್ತು **(R)**, **(A)**ನ ಸರಿಯಾದ ವಿವರಣೆಯಾಗಿದೆ.

(2) ಪ್ರತ್ಯೇಕವಾಗಿ **(A)** ಮತ್ತು **(R)** ಎರಡೂ ಸರಿಯಾಗಿವೆ ಆದರೆ **(R)**, **(A)**ನ ಸರಿಯಾದ ವಿವರಣೆಯಲ್ಲ.

(3) **(A)** ಸರಿಯಾಗಿದೆ ಆದರೆ **(R)** ತಪ್ಪಾಗಿದೆ.

(4) **(A)** ತಪ್ಪಾಗಿದೆ ಆದರೆ **(R)** ಸರಿಯಾಗಿದೆ.

31. ಕೆಳಕಂಡ ಹೇಳಿಕೆಗಳನ್ನು ಪರಿಶೀಲಿಸಿ :

**ಪ್ರತಿಪಾದನೆ (A)** : ಸಚಿವ ಸಂಪುಟದ ಸಾಮೂಹಿಕ ಹೊಣೆಗಾರಿಕೆಯು ಸಚಿವ ಸಂಪುಟ ಸದಸ್ಯರ ನಡುವಿನ ಒಗ್ಗಟ್ಟು ಮತ್ತು ಸಮನ್ವಯತೆಯನ್ನು ಸೂಚಿಸುತ್ತದೆ.

**ಕಾರಣ (R)** : ಸಚಿವ ಸಂಪುಟದ ಸದಸ್ಯರನ್ನು ಆಯ್ಕೆ ಮಾಡುವುದು ಅಥವಾ ಅವರನ್ನು ತೆಗೆದುಹಾಕುವುದು ಪ್ರಧಾನಮಂತ್ರಿಯ ಪರಮಾಧಿಕಾರವಾಗಿದೆ.

(1) ಪ್ರತ್ಯೇಕವಾಗಿ **(A)** ಮತ್ತು **(R)** ಎರಡೂ ಸರಿಯಾಗಿವೆ ಮತ್ತು **(R)**, **(A)**ನ ಸರಿಯಾದ ವಿವರಣೆಯಾಗಿದೆ.

(2) ಪ್ರತ್ಯೇಕವಾಗಿ **(A)** ಮತ್ತು **(R)** ಎರಡೂ ಸರಿಯಾಗಿವೆ ಆದರೆ **(R)**, **(A)**ನ ಸರಿಯಾದ ವಿವರಣೆಯಲ್ಲ.

(3) **(A)** ಸರಿಯಾಗಿದೆ ಆದರೆ **(R)** ತಪ್ಪಾಗಿದೆ.

(4) **(A)** ತಪ್ಪಾಗಿದೆ ಆದರೆ **(R)** ಸರಿಯಾಗಿದೆ.

32. ಸಂವಿಧಾನದ 368ನೇ ಅನುಚ್ಛೇದಕ್ಕೆ ಸಂಬಂಧಿಸಿದ ಈ ಕೆಳಕಂಡ ಹೇಳಿಕೆಗಳನ್ನು ಪರಿಶೀಲಿಸಿ :

(A) ಉಭಯ ಸದನಗಳ ನಡುವೆ ಬಿಕ್ಕಟ್ಟು ಉಂಟಾಗಿರುವ ಸಂದರ್ಭದಲ್ಲಿ ಸಂವಿಧಾನದ ತಿದ್ದುಪಡಿ ವಿಧೇಯಕವನ್ನು ಸಂಸತ್ತಿನ ಜಂಟಿ ಅಧಿವೇಶನದಲ್ಲಿ ಅನುಮೋದಿಸಬಹುದು.

(B) ಸಂವಿಧಾನದ ತಿದ್ದುಪಡಿ ಪ್ರಸ್ತಾವವನ್ನು ಲೋಕಸಭೆಯಲ್ಲಿ ಮಾತ್ರ ಮಂಡಿಸಬಹುದು.

ಇವುಗಳಲ್ಲಿ ಯಾವುದು/ವು **ಸರಿ**?

(1) (A) ಮಾತ್ರ

(2) (B) ಮಾತ್ರ

(3) (A) ಮತ್ತು (B) ಎರಡೂ

(4) ಮೇಲಿನ ಯಾವುದೂ ಅಲ್ಲ

33. ಭಾರತದ ಸಂವಿಧಾನವನ್ನು ತಿದ್ದುಪಡಿ ಮಾಡುವಾಗ, ಈ ಕೆಳಕಂಡ ಯಾವ ವಿಷಯಗಳಿಗೆ ಲೋಕಸಭೆಯ ಸರಳ ಬಹುಮತ ಮಾತ್ರ ಅಗತ್ಯವಿದೆ?

(A) ಅಸ್ತಿತ್ವದಲ್ಲಿರುವ ರಾಜ್ಯದ ಹೆಸರಿನ ಬದಲಾವಣೆ

(B) ಅಸ್ತಿತ್ವದಲ್ಲಿರುವ ರಾಜ್ಯದ ಗಡಿ ಬದಲಾವಣೆ

(C) ಹೊಸ ರಾಜ್ಯದ ಸೃಜನೆ

ಕೆಳಗೆ ನೀಡಿರುವ ಆಯ್ಕೆಗಳಿಂದ **ಸರಿಯಾದ** ಉತ್ತರವನ್ನು ಆರಿಸಿ :

(1) (A) ಮತ್ತು (B) ಮಾತ್ರ

(2) (B) ಮತ್ತು (C) ಮಾತ್ರ

(3) ಮೇಲಿನ ಎಲ್ಲವೂ

(4) ಮೇಲಿನ ಯಾವುದೂ ಅಲ್ಲ

Visit to Karnataka Help.in

34. ಈ ಕೆಳಕಂಡ ಯಾವುದು **ಸರಿಯಾಗಿ ಹೊಂದಿಕೆಯಾಗುವುದಿಲ್ಲ?** (ಅನುಚ್ಛೇದಗಳಗೆ ಸಂಬಂಧಸಿದಂತೆ)

(1) ಅನುಚ್ಛೇದ 360 — ಹಣಕಾಸಿನ ತುರ್ತುಪರಿಸ್ಥಿತಿ

(2) ಅನುಚ್ಛೇದ 368 — ಸಂವಿಧಾನದ ತಿದ್ದುಪಡಿ

(3) ಅನುಚ್ಛೇದ 323 A — ಆಡಳಿತ ನ್ಯಾಯಾಧಿಕರಣಗಳು

(4) ಅನುಚ್ಛೇದ 280 — ಹಣಕಾಸು ವಿಧೇಯಕ

35. ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

**ಪ್ರತಿಪಾದನೆ (A) :** ಒತ್ತಡ ತಂಡ (pressure group) ಎಂದರೆ, ತಮ್ಮ ಸಮಾನ ಹಿತಾಸಕ್ತಿಯ ಏಳಿಗೆಗಾಗಿ ಮತ್ತು ಅದರ ಸಮರ್ಥನೆಗಾಗಿ ಸಕ್ರಿಯವಾಗಿ ಸಂಘಟಿತಗೊಂಡ ಜನರ ಒಂದು ಗುಂಪು.

**ಕಾರಣ (R) :** ಅದು ಸರ್ಕಾರದ ಮೇಲೆ ಒತ್ತಡ ಹಾಕುವ ಮೂಲಕ ಸಾರ್ವಜನಿಕ ನೀತಿಯಲ್ಲಿ ಬದಲಾವಣೆ ತರಲು ಪ್ರಯತ್ನಿಸುವುದರಿಂದ ಅದನ್ನು ಹಾಗೆ ಕರೆಯಲಾಗುತ್ತದೆ.

(1) **(A)** ಮತ್ತು **(R)** ಎರಡೂ ಸರಿ

(2) **(A)** ಸರಿ ಆದರೆ **(R)** ತಪ್ಪು

(3) **(A)** ತಪ್ಪು ಆದರೆ **(R)** ಸರಿ

(4) **(A)** ಮತ್ತು **(R)** ಎರಡೂ ತಪ್ಪು

36. ಭಾರತದಲ್ಲಿ ಅವಿಶ್ವಾಸ ನಿರ್ಣಯಕ್ಕೆ ಸಂಬಂಧಿಸಿದ ಈ ಕೆಳಕಂಡ ಹೇಳಿಕೆಗಳನ್ನು ಪರಿಶೀಲಿಸಿ :

(A) ಭಾರತ ಸಂವಿಧಾನದಲ್ಲಿ ಅವಿಶ್ವಾಸ ನಿರ್ಣಯದ ಉಲ್ಲೇಖವಿಲ್ಲ.

(B) ಅವಿಶ್ವಾಸ ನಿರ್ಣಯ ಪ್ರಸ್ತಾಪವನ್ನು ಲೋಕಸಭೆಯಲ್ಲಿ ಮಾತ್ರ ಮಂಡಿಸಬಹುದು.

ಈ ಮೇಲಿನ ಯಾವ ಹೇಳಿಕೆ / ಹೇಳಿಕೆಗಳು **ಸರಿಯಾಗಿದೆ/ವೆ?**

(1) (A) ಮಾತ್ರ

(2) (B) ಮಾತ್ರ

(3) (A) ಮತ್ತು (B) ಎರಡೂ ಸರಿಯಾಗಿವೆ

(4) (A) ಅಥವಾ (B) ಯಾವುದೂ ಸರಿಯಲ್ಲ

37. ಭಾರತ ಸಂವಿಧಾನದಲ್ಲಿ ನಿರೂಪಿಸಲಾದ ರಾಜ್ಯ ನೀತಿಯ ನಿರ್ದೇಶನಾತ್ಮಕ ಮೂಲತತ್ವಗಳ ಅಡಿಯಲ್ಲಿನ ಈ ಕೆಳಕಂಡ ಉಪಬಂಧಗಳನ್ನು ಪರಿಶೀಲಿಸಿ :

(A) ಭಾರತದ ನಾಗರಿಕರಿಗೆ ಏಕರೂಪ ನಾಗರಿಕ ಸಂಹಿತೆಯನ್ನು ಸುನಿಶ್ಚಿತಗೊಳಿಸುವುದು.

(B) ಗ್ರಾಮ ಪಂಚಾಯಿತಿಗಳನ್ನು ಸುವ್ಯವಸ್ಥಿತಗೊಳಿಸುವುದು.

(C) ಗ್ರಾಮೀಣ ಪ್ರದೇಶಗಳಲ್ಲಿ ಗುಡಿ ಕೈಗಾರಿಕೆಗಳನ್ನು ಪ್ರೋತ್ಸಾಹಿಸುವುದು.

(D) ಎಲ್ಲಾ ಕೆಲಸಗಾರರಿಗೆ ಯುಕ್ತ ಬಿಡುವಿನ ವೇಳೆ ಹಾಗೂ ಸಾಂಸ್ಕೃತಿಕ ಅವಕಾಶಗಳನ್ನು ಖಾತ್ರಿಪಡಿಸುವುದು.

ಮೇಲ್ಕಂಡ ಯಾವುವು ರಾಜ್ಯ ನೀತಿಯ ನಿರ್ದೇಶಕ ಮೂಲತತ್ವಗಳಲ್ಲಿ ಬಿಂಬಿತವಾಗುವ ಗಾಂಧಿ ತತ್ವಗಳಾಗಿವೆ?

(1) (A), (B) ಮತ್ತು (D) ಮಾತ್ರ

(2) (B) ಮತ್ತು (C) ಮಾತ್ರ

(3) (A), (C) ಮತ್ತು (D) ಮಾತ್ರ

(4) (A), (B), (C) ಮತ್ತು (D)

Visit to Karnataka Help.in

38. 'ನ್ಯಾಯ' ಪರಿಕಲ್ಪನೆಗೆ ಸಂಬಂಧಿಸಿದಂತೆ ಈ ಕೆಳಕಂಡ ಅಂಶಗಳನ್ನು ಪರಿಗಣಿಸಿ, ಸರಿಯಾದ ಸಂಕೇತವನ್ನು ಆಯ್ಕೆ ಮಾಡಿ :

(A) ಪಾರಿತೋಷಕಗಳು ಮತ್ತು ದಂಡನೆಗಳ ನೀಡಿಕೆ

(B) ವಿವರಣಾತ್ಮಕ ಪರಿಕಲ್ಪನೆ

(C) ನೈತಿಕ ಅಥವಾ ಪ್ರಮಾಣಿತ ಪರಿಕಲ್ಪನೆ

(D) ಅಗತ್ಯ ಸ್ಪರ್ಧಾತ್ಮಕ ಪರಿಕಲ್ಪನೆ

(1) (A) ಮತ್ತು (B) ಮಾತ್ರ

(2) (A) ಮತ್ತು (C) ಮಾತ್ರ

(3) (A), (B) ಮತ್ತು (D) ಮಾತ್ರ

(4) (A), (B), (C) ಮತ್ತು (D)

39. ಭಾರತ ಸರ್ಕಾರವು ಯಾರ ಅಧ್ಯಕ್ಷತೆಯಲ್ಲಿ ಭೂ ಸುಧಾರಣಾ ಆಯೋಗವನ್ನು ರಚಿಸಿತ್ತು?

(1) ಬಿ.ಡಿ. ಜತ್ತಿ

(2) ದಾದಾಭಾಯಿ ನವರೋಜಿ

(3) ವಿನೋಬಾ ಭಾವೆ

(4) ಜೆ.ಸಿ. ಕುಮಾರಪ್ಪ

40. ಕೆಳಗಿನ ಜೋಡಿಗಳನ್ನು ಪರಿಗಣಿಸಿ :

| ಅಧಿನಿಯಮಗಳು | ವರ್ಷ |
|---|---|
| A. ಕರ್ನಾಟಕ ಭೂ ಕಂದಾಯ ಅಧಿನಿಯಮ | 1949 |
| B. ಹಿಂದೂ ಉತ್ತರಾಧಿಕಾರ ಅಧಿನಿಯಮ | 1950 |
| C. ಮೈಸೂರು ಗೇಣಿದಾರಿಕೆ ಅಧಿನಿಯಮ | 1952 |
| D. ಕರ್ನಾಟಕ ಭೂ ಸುಧಾರಣಾ ಅಧಿನಿಯಮ | 1961 |

ಮೇಲಿನ ಜೋಡಿಗಳಲ್ಲಿ ಎಷ್ಟು ಜೋಡಿ/ಜೋಡಿಗಳು ಸರಿಯಾಗಿ ಹೊಂದಿಕೆಯಾಗಿವೆ?

(1) ಒಂದು ಜೋಡಿ ಮಾತ್ರ

(2) ಎರಡು ಜೋಡಿಗಳು ಮಾತ್ರ

(3) ಮೂರು ಜೋಡಿಗಳು ಮಾತ್ರ

(4) ಎಲ್ಲಾ ನಾಲ್ಕೂ ಜೋಡಿಗಳು

41. ***ಪಟ್ಟಿ—I*** ನ್ನು ***ಪಟ್ಟಿ—II*** ರೊಂದಿಗೆ ಹೊಂದಿಸಿ:

| ***ಪಟ್ಟಿ—I*** | ***ಪಟ್ಟಿ—II*** |
|---|---|
| A. ಸರ್ವೋದಯ ಚಳುವಳಿ | I. ಮಹಾತ್ಮ ಗಾಂಧಿ |
| B. ಭೂದಾನ ಚಳುವಳಿ | II. ವರ್ಗೀಸ್ ಕುರಿಯನ್ |
| C. ಹಸಿರು ಕ್ರಾಂತಿ | III. ವಿನೋಬಾ ಭಾವೆ |
| D. ಶ್ವೇತ ಕ್ರಾಂತಿ | IV. ಎಂ.ಎಸ್. ಸ್ವಾಮಿನಾಥನ್ |

ಕೆಳಗೆ ನೀಡಿರುವ ಆಯ್ಕೆಗಳಿಂದ **ಸರಿಯಾದ** ಉತ್ತರವನ್ನು ಆರಿಸಿ :

| | A | B | C | D |
|---|---|---|---|---|
| (1) | I | IV | III | II |
| (2) | II | I | IV | III |
| (3) | I | III | IV | II |
| (4) | II | IV | I | III |

42. ಕೆಳಗಿನ ಹೇಳಿಕೆಗಳನ್ನು ಗಮನಿಸಿ :

**ಹೇಳಿಕೆ (A) :** ನೀರಾವರಿ ಸೌಲಭ್ಯಗಳ ಕೊರತೆಯು ಕೃಷಿಯಲ್ಲಿ ಕಡಿಮೆ ಉತ್ಪಾದನೆಗೆ ಕಾರಣವಾಗುತ್ತದೆ.

**ಕಾರಣ (R) :** ನೀರಾವರಿ ಸೌಲಭ್ಯಗಳ ಕೊರತೆಯು ಬೆಳೆಗಳಿಗೆ ಅಸಮರ್ಪಕ ನೀರು ಪೂರೈಕೆಗೆ ಕಾರಣವಾಗುತ್ತದೆ. ಇದು ನೇರವಾಗಿ ಕೃಷಿ ಉತ್ಪಾದನೆಯನ್ನು ಕಡಿಮೆ ಮಾಡುತ್ತದೆ.

(1) **(A)** ಮತ್ತು **(R)** ಎರಡೂ ಸರಿಯಾಗಿವೆ ಮತ್ತು **(R)**ಗೆ **(A)** ಸರಿಯಾದ ವಿವರಣೆಯಾಗಿದೆ.

(2) **(A)** ಮತ್ತು **(R)** ಎರಡೂ ಸರಿಯಾಗಿವೆ ಆದರೆ **(R)**ಗೆ **(A)** ಸರಿಯಾದ ವಿವರಣೆಯಲ್ಲ.

(3) **(A)** ಸರಿಯಾಗಿದೆ ಆದರೆ **(R)** ತಪ್ಪಾಗಿದೆ.

(4) **(A)** ತಪ್ಪಾಗಿದೆ ಆದರೆ **(R)** ಸರಿಯಾಗಿದೆ.

**Visit to Karnataka Help.in**

**43.** ಭೂ ಹಿಡುವಳಿಗಳ ಮೇಲಿನ ಗರಿಷ್ಠ ಮಿತಿ (ceiling) ಹೇರಿಕೆಯ ಮುಖ್ಯ ಉದ್ದೇಶಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

(A) ಭೂಮಾಲೀಕತ್ವದಲ್ಲಿನ ಅಸಮಾನತೆಯನ್ನು ಕಡಿಮೆ ಮಾಡುವುದು.

(B) ಜನರ ಕೃಷಿ ಆದಾಯದಲ್ಲಿ ಎದ್ದುಕಾಣುತ್ತಿರುವ ಅಸಮಾನತೆಯನ್ನು ಕಡಿಮೆ ಮಾಡುವುದು.

(C) ಹೆಚ್ಚುವರಿ ಭೂಮಿಯನ್ನು ಭೂರಹಿತ ಸಾಗುವಳಿದಾರರಿಗೆ ವಿತರಿಸುವ ಮೂಲಕ ಸ್ವಯಂ ಉದ್ಯೋಗದ ಅವಕಾಶಗಳನ್ನು ಹೆಚ್ಚಿಸುವುದು.

ಮೇಲಿನ ಹೇಳಿಕೆಗಳಲ್ಲಿ ಯಾವುವು **ಸರಿಯಾಗಿವೆ?**

(1) (A) ಮತ್ತು (B) ಮಾತ್ರ

(2) (B) ಮತ್ತು (C) ಮಾತ್ರ

(3) (A) ಮತ್ತು (C) ಮಾತ್ರ

(4) (A), (B) ಮತ್ತು (C)

**44.** ***ಪಟ್ಟಿ—I*** ನ್ನು ***ಪಟ್ಟಿ—II*** ರೊಂದಿಗೆ ಹೊಂದಿಸಿ:

| ***ಪಟ್ಟಿ—I*** | ***ಪಟ್ಟಿ—II*** |
|---|---|
| A. ಧಾರವಾಡ ಜಿಲ್ಲೆಯಲ್ಲಿ ಮಾಗಡಿ ರೈತರ ದಂಗೆ | I. 1978 |
| B. ಮಂಡ್ಯ ಜಿಲ್ಲೆಯಲ್ಲಿ ವರುಣ ನಾಲೆ ರೈತರ ದಂಗೆ | II. 1972 |
| C. ನರಗುಂದ ಮತ್ತು ನವಲಗುಂದ ರೈತರ ದಂಗೆ | III. 1986 |
| D. ಸಿಂಧನೂರು ರೈತರ ದಂಗೆ | IV. 1980 |

ಕೆಳಗೆ ನೀಡಿರುವ ಆಯ್ಕೆಗಳಿಂದ **ಸರಿಯಾದ** ಉತ್ತರವನ್ನು ಆರಿಸಿ :

| | A | B | C | D |
|---|---|---|---|---|
| (1) | II | IV | I | III |
| (2) | III | I | II | IV |
| (3) | IV | II | III | I |
| (4) | II | I | IV | III |

**45.** ಕೆಳಗಿನ ಭೂ ಸುಧಾರಣಾ ಕ್ರಮಗಳನ್ನು ಪರಿಗಣಿ

(A) ಮಧ್ಯವರ್ತಿಗಳ ನಿರ್ಮೂಲನೆ

(B) ಗೇಣಿ ಪದ್ಧತಿಯ ಸುಧಾರಣೆ

(C) ಭೂ ಹಿಡುವಳಿಗಳ ಮೇಲೆ ಗರಿಷ್ಠ ಮಿತಿ ಹೇರಿಕೆ

(D) ಭೂ ಹಿಡುವಳಿಗಳ ಕ್ರೋಢೀಕರಣ

ಈ ಮೇಲಿನ ಯಾವ ಕ್ರಮಗಳು ಕರ್ನಾಟಕ ಭೂ ಸುಧಾರಣೆಯ ಭಾಗವಾಗಿವೆ?

(1) (A), (B) ಮತ್ತು (C) ಮಾತ್ರ

(2) (B), (C) ಮತ್ತು (D) ಮಾತ್ರ

(3) (A), (C) ಮತ್ತು (D) ಮಾತ್ರ

(4) (A), (B), (C) ಮತ್ತು (D)

**46.** ಕರ್ನಾಟಕ ಸರ್ಕಾರವು ಜಾರಿಗೆ ತಂದಿರುವ ರಾಜೀವ್ ಗಾಂಧಿ ಉದ್ಯಮಶೀಲತಾ ಕಾರ್ಯಕ್ರಮದ ವೈಶಿಷ್ಟ್ಯಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ಹೇಳಿಕೆಗಳ ಬಗ್ಗೆ ನಿರ್ಧರಿಸಿ :

(A) ನಾವೀನ್ಯತಾ ಉದ್ಯಮಗಳು, ನವೋದ್ಯಮಗಳನ್ನು ಉತ್ತೇಜಿಸಲು ಆಲೋಚನೆ ಮತ್ತು ನಾವೀನ್ಯತೆಯನ್ನು ಪೋಷಿಸುವುದು.

(B) ಕರ್ನಾಟಕವನ್ನು ನವೋದ್ಯಮ (ಸ್ಟಾರ್ಟ್‌ಅಪ್) ಪರಿಸರ ವ್ಯವಸ್ಥೆಯಲ್ಲಿ ಉನ್ನತ ಸ್ಥಾನವನ್ನು ಕಾಯ್ದುಕೊಳ್ಳುವುದು.

(C) ಕರ್ನಾಟಕದಲ್ಲಿ ಕೃಷಿ ಕ್ಷೇತ್ರವನ್ನು ಅಭಿವೃದ್ಧಿಪಡಿಸುವುದು.

(D) ಕೈಗಾರಿಕಾ ಮತ್ತು ಸೇವಾ ವಲಯಗಳನ್ನು ಅಭಿವೃದ್ಧಿಪಡಿಸುವುದು.

ಮೇಲಿನ ಹೇಳಿಕೆಗಳಿಗೆ ಸಂಬಂಧಿಸಿದಂತೆ ಯಾವ ಆಯ್ಕೆಗಳು **ಸರಿಯಾಗಿವೆ?**

(1) (A) ಮತ್ತು (B) ಮಾತ್ರ ಸರಿಯಾಗಿವೆ

(2) (A) ಮತ್ತು (C) ಮಾತ್ರ ಸರಿಯಾಗಿವೆ

(3) (A), (B) ಮತ್ತು (C) ಮಾತ್ರ ಸರಿಯಾಗಿವೆ

(4) ಮೇಲಿನ ಎಲ್ಲವೂ ಸರಿಯಾಗಿವೆ

Visit to Karnataka Help.in


ಈ ಕೆಳಕಂಡ ಮಾಹಿತಿಯನ್ನು ಓದಿ ಮತ್ತು (**51** ಮತ್ತು **52**) ರವರೆಗಿನ ಪ್ರಶ್ನೆಗಳಿಗೆ ಉತ್ತರಿಸಿ :

*P*, *T*, *V*, *R*, *M*, *D*, *K* ಮತ್ತು *W* ರವರುಗಳು ಮಧ್ಯಕ್ಕೆ ಮುಖಮಾಡಿ ವೃತ್ತಾಕಾರದ ಒಂದು ಮೇಜಿನ ಸುತ್ತ ಕುಳಿತುಕೊಂಡಿದ್ದಾರೆ. *V* ಯು *T* ನ ಎಡಕ್ಕೆ ಎರಡನೆಯವ ನಾಗಿದ್ದಾನೆ. *T* ಯು *M* ನ ಬಲಕ್ಕೆ ನಾಲ್ಕನೆಯವನಾಗಿದ್ದಾನೆ. *D* ಮತ್ತು *P* ಯವರು *T* ನ ನಂತರದ (ಹತ್ತಿರದ) ಪಕ್ಕದವರಲ್ಲ. *D* ಯು *P* ನ ಬಲಕ್ಕೆ ಮೂರನೆಯವನಾಗಿದ್ದಾನೆ. *W* ಯು *P* ಯ ನಂತರ (ಹತ್ತಿರದ)ದ ಪಕ್ಕದವನಲ್ಲ. *P* ಯು *K* ನ ನಂತರದ (ಹತ್ತಿರದ) ಎಡಭಾಗದಲ್ಲಿದ್ದಾನೆ.

**51.** *K* ನ ಎಡಭಾಗಕ್ಕೆ ಎರಡನೆಯವರಾಗಿ ಯಾರಿದ್ದಾರೆ?

(1) *P*

(2) *M*

(3) *R*

(4) *W*

**52.** *V* ನ ನಂತರದ (ಹತ್ತಿರದ) ಎಡಕ್ಕೆ ಯಾರಿದ್ದಾರೆ?

(1) *D*

(2) *W*

(3) *M*

(4) *K*

**53.** ರಾಜ್ಯ ಚುನಾವಣಾ ಆಯೋಗದ ಅನುಸಾರ ಎಷ್ಟು ಜನಸಂಖ್ಯೆಗೆ ಒಂದು ಗ್ರಾಮ ಪಂಚಾಯಿತಿಯನ್ನು ನಿಗಧಿಪಡಿಸಲಾಗಿದೆ?

(1) ಪ್ರತಿ ಐದುನೂರು ಜನಸಂಖ್ಯೆಗೆ ಒಬ್ಬ ಸದಸ್ಯ

(2) ಪ್ರತಿ ನಾಲ್ಕುನೂರು ಜನಸಂಖ್ಯೆಗೆ ಒಬ್ಬ ಸದಸ್ಯ

(3) ಪ್ರತಿ ಆರುನೂರು ಜನಸಂಖ್ಯೆಗೆ ಒಬ್ಬ ಸದಸ್ಯ

(4) ಪ್ರತಿ ಮೂರುನೂರು ಜನಸಂಖ್ಯೆಗೆ ಒಬ್ಬ ಸದಸ್ಯ

**54.** ತಾಲ್ಲೂಕು ಪಂಚಾಯತ್‌ನ ಸಮಿತಿಗಳ ಸಂಬಂಧಿಸಿದಂತೆ ಈ ಕೆಳಕಂಡ ಹೇಳಿಕೆಗಳನ್ನು ಪರಿಶೀಲಿಸಿ :

(A) ಸಾಮಾನ್ಯ ಸ್ಥಾಯಿ ಸಮಿತಿ

(B) ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸಮಿತಿ

(C) ಸಾಮಾಜಿಕ ನ್ಯಾಯ ಸಮಿತಿ

(D) ಸಾಮಾನ್ಯ ಯೋಜನಾ ಸಮಿತಿ

ಈ ಕೆಳಕಂಡ ಆಯ್ಕೆಗಳಲ್ಲಿ **ಸರಿಯಾದ** ಉತ್ತರವನ್ನು ಆಯ್ಕೆ ಮಾಡಿ :

(1) (A) ಮತ್ತು (B) ಮಾತ್ರ ಸರಿಯಿವೆ

(2) (B) ಮತ್ತು (C) ಮಾತ್ರ ಸರಿಯಿವೆ

(3) (A), (B) ಮತ್ತು (C) ಮಾತ್ರ ಸರಿಯಿವೆ

(4) ಮೇಲಿನ ಎಲ್ಲವೂ ಸರಿಯಿವೆ

**55.** ಒಂದು ಗುಪ್ತ ಭಾಷೆಯಲ್ಲಿ 'RADIATE'ಯನ್ನು 0345379 ಮತ್ತು 'GENIUS'ಯನ್ನು 192568 ಎಂದು ಬರೆದರೆ, ಅದೇ ಗುಪ್ತ ಭಾಷೆಯಲ್ಲಿ 'RESIGN'ಯನ್ನು ಏನೆಂದು ಬರೆಯುತ್ತೀರಿ?

(1) 512089

(2) 098512

(3) 089125

(4) 215089

Visit to Karnataka Help.in

56. ಸಾಮಾನ್ಯವಾಗಿ ಜಿಲ್ಲಾ ಪಂಚಾಯತ್ ತನ್ನ ಕಾರ್ಯಕಲಾಪಗಳನ್ನು ನಿರ್ಧರಿಸಲು ಕನಿಷ್ಠ ಎಷ್ಟು ತಿಂಗಳಿಗೊಮ್ಮೆ ಸಭೆ ಸೇರಬೇಕು?

(1) ಒಂದು ತಿಂಗಳಿಗೊಮ್ಮೆ

(2) ಎರಡು ತಿಂಗಳಿಗೊಮ್ಮೆ

(3) ಮೂರು ತಿಂಗಳಿಗೊಮ್ಮೆ

(4) ನಾಲ್ಕು ತಿಂಗಳಿಗೊಮ್ಮೆ

57. ಪಂಚಾಯತ್ ರಾಜ್‌ನ 73 ಮತ್ತು 74ನೇ ಸಂವಿಧಾನದ ತಿದ್ದುಪಡಿಗಳನ್ನು ಸಂವಿಧಾನದ ಯಾವ ಭಾಗ ಮತ್ತು ಅನುಸೂಚಿಯಲ್ಲಿ ಸೇರಿಸಲಾಗಿದೆ?

(1) ಭಾಗ VI, VIA ಮತ್ತು ಆರನೇ ಅನುಸೂಚಿ

(2) ಭಾಗ VII, VIIA ಮತ್ತು ಏಳನೇ ಅನುಸೂಚಿ

(3) ಭಾಗ VIII, VIIIA ಮತ್ತು ಎಂಟನೇ ಅನುಸೂಚಿ

(4) ಭಾಗ IX, IXA ಮತ್ತು ಹನ್ನೊಂದನೇ ಅನುಸೂಚಿ

58. 'ಕರ್ನಾಟಕ ಒನ್ ಪ್ರಾಜೆಕ್ಟ್' ಕುರಿತ ಹೇಳಿಕೆಗಳು

(A) ನಾಗರಿಕ ಸ್ನೇಹಿಯ ಮಾದರಿಯಲ್ಲಿ ವಿವಿಧ ಸರ್ಕಾರಿ ಸಂಸ್ಥೆಗಳು ಮತ್ತು ಖಾಸಗಿ ಕಂಪನಿಗಳ ಸೇವೆಗಳನ್ನು ಒಂದೇ ಸೂರಿನಡಿ ಪೂರೈಸುವುದಕ್ಕಾಗಿ ಕರ್ನಾಟಕದ ಇತರೆ ನಗರಗಳಿಗೆ ಬೆಂಗಳೂರು ಒನ್‌ನ ಪ್ರತಿರೂಪವನ್ನು ವಿಸ್ತರಿಸುವುದಾಗಿದೆ.

(B) ಪ್ರಸ್ತುತ 'ಕರ್ನಾಟಕ ಒನ್' 24 ನಗರಗಳಲ್ಲಿ ಕಾರ್ಯ ನಿರ್ವಹಿಸುತ್ತಿದೆ.

ಮೇಲಿನ ಹೇಳಿಕೆಗಳಲ್ಲಿ ***ಸರಿಯಾದ*** ಹೇಳಿಕೆ/ಹೇಳಿಕೆಗಳು ಯಾವುವು?

(1) (A) ಮತ್ತು (B) ಎರಡೂ

(2) (A) ಮಾತ್ರ ಸರಿಯಾಗಿದೆ

(3) (B) ಮಾತ್ರ ಸರಿಯಾಗಿದೆ

(4) ಮೇಲಿನ ಯಾವುದೂ ಅಲ್ಲ

59. ಸೇವಾ ಸಿಂಧು ಎಂದರೇನು?

(1) ಇದು ಸರ್ಕಾರಿ ಸೇವೆಗಳನ್ನು ನಾಗರಿಕರ ಮನೆ ಬಾಗಿಲಿಗೆ ಒದಗಿಸುವ ಕರ್ನಾಟಕ ಸರ್ಕಾರದ ಉಪಕ್ರಮವಾಗಿದೆ.

(2) ಇದೊಂದು ಉಡುಪಿಯಲ್ಲಿರುವ ನದಿ ಸೇತುವೆಯ ಹೆಸರಾಗಿದೆ.

(3) ನೈಸರ್ಗಿಕ ಸಂಪನ್ಮೂಲಗಳನ್ನು ಪರಿರಕ್ಷಿಸುವ ಭಾರತ ಸರ್ಕಾರದ ಒಂದು ಉಪಕ್ರಮವಾಗಿದೆ.

(4) ಮೇಲಿನ ಯಾವುದೂ ಅಲ್ಲ

60. 'ಗ್ರಾಮ ಒನ್' ಕುರಿತ ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ :

(A) ಇದು ನಗರದ ಜನರ ಮನೆಬಾಗಿಲಿಗೆ ಎಲ್ಲಾ ಇಲಾಖೆಗಳ ನಾಗರಿಕ ಸೇವೆಗಳನ್ನು ಒದಗಿಸುವ ಗುರಿಯಿರುವ ಸರ್ಕಾರದ ಒಂದು ಮಹತ್ವಾಕಾಂಕ್ಷೆಯ ಕಾರ್ಯಕ್ರಮವಾಗಿದೆ.

(B) 'ಗ್ರಾಮ ಒನ್' ಕೇಂದ್ರಗಳು ಭಾನುವಾರದಂದು ಕಾರ್ಯ ನಿರ್ವಹಿಸುವುದಿಲ್ಲ.

ಮೇಲಿನ ಹೇಳಿಕೆಗಳಲ್ಲಿ **ಸರಿಯಾದ** ಹೇಳಿಕೆ/ಹೇಳಿಕೆಗಳು ಯಾವುವು?

(1) (A) ಮತ್ತು (B) ಎರಡೂ

(2) (A) ಮಾತ್ರ ಸರಿಯಾಗಿದೆ

(3) (B) ಮಾತ್ರ ಸರಿಯಾಗಿದೆ

(4) ಮೇಲಿನ ಯಾವುದೂ ಅಲ್ಲ

Visit to Karnataka Help.in

61. ಗಡಿಯಾರವೊಂದರಲ್ಲಿ 10:30 ಆದಾಗ ನಿಮಿಷದ ಮುಳ್ಳು ವಾಯುವ್ಯ ದಿಕ್ಕನ್ನು ಪ್ರತಿನಿಧಿಸಿದರೆ, ಗಂಟೆಯ ಮುಳ್ಳು ಯಾವ ದಿಕ್ಕನ್ನು ಪ್ರತಿನಿಧಿಸುತ್ತದೆ?

(1) ಪೂರ್ವ

(2) ಉತ್ತರ

(3) ಪಶ್ಚಿಮ

(4) ದಕ್ಷಿಣ

62. *A* ಮತ್ತು *B* ಸಹೋದರರು, *C* ಮತ್ತು *D* ಸಹೋದರಿಯರು. *A* ಅವರ ಮಗ *D* ಯ ಸಹೋದರ. *B*, *C* ಗೆ ಹೇಗೆ ಸಂಬಂಧಿಸಿರುತ್ತಾರೆ?

(1) ಚಿಕ್ಕಪ್ಪ

(2) ಸಹೋದರ

(3) ತಂದೆ

(4) ಅಜ್ಜ

63. ಕೆಳಗಿನ ಯಾವ ಜೋಡಿಗಳು ತಪ್ಪಾಗಿ ಹೊಂದಿಕೆಯಾಗಿದೆ?

(1) ಪ್ರೈರಿ — ಎಪಿಫೈಟ್ಸ್

(2) ಸವನ್ನಾ — ಅಕೇಶಿಯಾ ಮರಗಳು

(3) ತಂಡ್ರಾ — ಪರ್ಮಾಫ್ರೋಸ್ಟ್

(4) ಕಾನಿಫೆರಸ್ ಅರಣ್ಯ — ಸದಾ ಹಸಿರಿನ ಮರಗಳು

64. CPCB ಪ್ರಕಾರ ವಾಸ ಪ್ರದೇಶಗಳಲ್ಲಿನ ಕೆಳಕಂಡ ವಾಯು ಮಾಲಿನ್ಯಕಾರಕಗಳ ನಿಗದಿತ ಮಿತಿಯ **ಸರಿಯಾದ** ಕ್ರಮವನ್ನು ಆಯ್ಕೆಮಾಡಿ

(A) PM 2·5

(B) PM-10

(C) $SO_x$

(D) Pb

ಕೆಳಗೆ ನೀಡಿರುವ ಆಯ್ಕೆಗಳಿಂದ **ಸರಿಯಾದ** ಉತ್ತರವನ್ನು ಆರಿಸಿ :

(1) Pb > $SO_x$ > PM-10 > PM 2·5

(2) PM-10 > PM 2·5 > $SO_x$ > Pb

(3) PM 2·5 > PM-10 > Pb > $SO_x$

(4) PM-10 > $SO_x$ > PM 2·5 > Pb

65. ಗ್ರಾಮದಾನ ಚಳುವಳಿಯು ಈ ಕೆಳಗಿನವರಲ್ಲಿ ಯಾರಿಗೆ ಸಂಬಂಧಿಸಿರುತ್ತದೆ?

(1) ವಿನೋಬಾ ಭಾವೆ

(2) ರಾಜಾ ರಾಮ್‌ಮೋಹನ್ ರಾಯ್

(3) ಲಾಲ್ ಬಹದ್ದೂರ್ ಶಾಸ್ತ್ರಿ

(4) ಮೇಲಿನ ಎಲ್ಲರಿಗೂ

Visit to Karnataka Help.in

66. ಪಟ್ಟಿ—I ನ್ನು ಪಟ್ಟಿ—II ರೊಂದಿಗೆ ಹೊಂದಿಸಿ :

| ಪಟ್ಟಿ—I | ಪಟ್ಟಿ—II |
| --- | --- |
| A. ಜಮೀನ್ದಾರಿ ನಿರ್ಮೂಲನೆ ಅಧಿನಿಯಮ | I. ಭೂ-ರಹಿತ ಬೇಸಾಯಗಾರರಿಗೆ ಭೂಮಿಯ ಸ್ವಯಂ ದಾನ |
| B. ಭೂದಾನ ಚಳುವಳಿ | II. ಹೆಚ್ಚು ಉತ್ಪನ್ನದ ತಳಿಗಳೊಂದಿಗೆ ಕೃಷಿ ಉತ್ಪಾದಕತೆ ಉತ್ತೇಜಿಸಲು ಭೂಮಿಯ ಮರು ವಿತರಣೆ |
| C. ಹಸಿರು ಕ್ರಾಂತಿ | III. ಗ್ರಾಮೀಣ ಪ್ರದೇಶಗಳಲ್ಲಿ ಸ್ಥಳೀಯ ಸ್ವಯಂ ಸರ್ಕಾರಗಳ ಸ್ಥಾಪನೆ |
| D. ಪಂಚಾಯತ್ ರಾಜ್ ವ್ಯವಸ್ಥೆ | IV. ಗೇಣಿದಾರರಿಗೆ ನೇರವಾಗಿ ಭೂಮಿಯನ್ನು ವಿತರಿಸಲು ಮಧ್ಯವರ್ತಿ ಭೂ ಹಿಡುವಳಿದಾರರ ನಿರ್ಮೂಲನೆ |

ಕೆಳಗೆ ನೀಡಿರುವ ಆಯ್ಕೆಗಳಿಂದ **ಸರಿಯಾದ** ಉತ್ತರವನ್ನು ಆರಿಸಿ :

| | A | B | C | D |
| --- | --- | --- | --- | --- |
| (1) | IV | I | II | III |
| (2) | II | IV | III | I |
| (3) | III | IV | I | II |
| (4) | I | II | III | IV |

67. ಈ ಕೆಳಗಿನ ಯಾವ ಇ-ಸೇವೆಯನ್ನು ಸರ್ಕಾರದಿಂದ ವ್ಯವಹಾರಕ್ಕೆ (G2B) ಬಳಸಲಾಗುತ್ತದೆ?

(1) ಜಿ.ಎಸ್.ಟಿ. (GST)

(2) ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆ (HRMS)

(3) ಇ-ಆಫೀಸ್ (e-Office)

(4) ಇ-ಪಾರ್ (e-PAR)

68. ದೇಶದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಕ್ಕಾಗಿ ರಾಜ್ಯ ಪರಿಷತ್ತನ್ನು ಸ್ಥಾಪಿಸಿದ ಮೊದಲ ರಾಜ್ಯ ಯಾವುದು?

(1) ಕರ್ನಾಟಕ

(2) ಆಂಧ್ರ ಪ್ರದೇಶ

(3) ಛತ್ತೀಸ್‌ಗಢ

(4) ರಾಜಸ್ಥಾನ

69. _____ ಸಮರ್ಥ ಸಂವಹನ ಮತ್ತು ಮಾಹಿತಿ ಹಂಚಿಕೆಗಾಗಿ ಕರ್ನಾಟಕ ರಾಜ್ಯದಾದ್ಯಂತ ಸರ್ಕಾರಿ ಕಛೇರಿಗಳನ್ನು ಸಂಪರ್ಕಿಸುವ ನೆಟ್‌ವರ್ಕ್ ಆಗಿದೆ.

(1) ಕರ್ನಾಟಕ ರಾಜ್ಯ ಲೋಕಲ್ ಏರಿಯಾ ನೆಟ್‌ವರ್ಕ್

(2) ಕರ್ನಾಟಕ ರಾಜ್ಯ ವೈಡ್ ಏರಿಯಾ ನೆಟ್‌ವರ್ಕ್

(3) ಕರ್ನಾಟಕ ರಾಜ್ಯ ಮೆಟ್ರೋಪಾಲಿಟನ್ ಏರಿಯಾ ನೆಟ್‌ವರ್ಕ್

(4) ಕರ್ನಾಟಕ ರಾಜ್ಯ ವರ್ಚುವಲ್ ಏರಿಯಾ ನೆಟ್‌ವರ್ಕ್

70. ಆನ್‌ಲೈನ್‌ನಲ್ಲಿ ಸಮೀಕ್ಷೆ ಮಾಡಲು ಮತ್ತು ಆನ್‌ಲೈನ್‌ನಲ್ಲಿ ಪ್ರಶ್ನೋತ್ತರ ನಡೆಸಲು ಈ ಕೆಳಗಿನ ಗೂಗಲ್ ಉತ್ಪನ್ನಗಳಲ್ಲಿ ಯಾವುದು ನಿಮಗೆ ಅನುಮತಿಸುತ್ತದೆ?

(1) ಗೂಗಲ್ ಫಾರ್ಮ್ಸ್

(2) ಗೂಗಲ್ ಸ್ಲೈಡ್ಸ್

(3) ಗೂಗಲ್ ಡಾಕ್ಸ್

(4) ಗೂಗಲ್ ಫಾಂಟ್ಸ್

**71.** ಮೆಲ್ವಿನ್ ಮತ್ತು ಲೂಯಿಸ್‌ರವರ ವಯಸ್ಸುಗಳು 7 : 10ರ ಅನುಪಾತದಲ್ಲಿವೆ. 6 ವರ್ಷಗಳ ತರುವಾಯ ಅವರ ವಯಸ್ಸಿನ ಅನುಪಾತ 17 : 23ರಷ್ಟಾಗುತ್ತದೆ. ಅವರ ವಯಸ್ಸಿನ ವ್ಯತ್ಯಾಸವೇನು?

(1) 8 ವರ್ಷಗಳು

(2) 4 ವರ್ಷಗಳು

(3) 12 ವರ್ಷಗಳು

(4) 10 ವರ್ಷಗಳು

**72.** ಜಾನ್ ಒಂದು ಕೆಲಸವನ್ನು 6 ಗಂಟೆಗಳಲ್ಲಿ ಮತ್ತು ಸಾರಾ ಅದೇ ಕೆಲಸವನ್ನು 12 ಗಂಟೆಗಳಲ್ಲಿ ಪೂರ್ಣಗೊಳಿಸಿದರೆ, ಆ ಕೆಲಸವನ್ನು ಒಟ್ಟಿಗೆ ಸೇರಿ ಪೂರ್ಣಗೊಳಿಸಲು ಅವರು ಎಷ್ಟು ಸಮಯವನ್ನು ತೆಗೆದುಕೊಳ್ಳುತ್ತಾರೆ?

(1) 3 ಗಂಟೆಗಳು

(2) 4 ಗಂಟೆಗಳು

(3) 5 ಗಂಟೆಗಳು

(4) 6 ಗಂಟೆಗಳು

**73.** ಒಂದು ಕ್ರಿಕೆಟ್ ಪಂದ್ಯದಲ್ಲಿ *A*, *B* ಮತ್ತು *C* ಎಂದು ಹೇಳಲಾಗುವ, ಪ್ರತಿಯೊಂದರ ಬೆಲೆ ಅನುಕ್ರಮವಾಗಿ ₹ 1,000, ₹ 500 ಮತ್ತು ₹ 200ಗಳನ್ನು ಹೊಂದಿರುವ ಮೂರು ರೀತಿಯ ಟಿಕೆಟ್‌ಗಳಿವೆ. *A*, *B* ಮತ್ತು *C* ವರ್ಗದ ಮಾರಾಟವಾದ ಟಿಕೆಟ್‌ನ ಅನುಪಾತವು 3 : 2 : 5 ಇದೆ. ಟಿಕೆಟ್‌ಗಳ ಮಾರಾಟದಿಂದ ಬಂದ ಒಟ್ಟು ಮೊತ್ತವು ₹ 2.5 ಕೋಟಿಗಳಾಗಿದ್ದರೆ, ಮಾರಾಟವಾದ ಟಿಕೆಟ್‌ಗಳ ಒಟ್ಟು ಸಂಖ್ಯೆಯನ್ನು ಕಂಡುಹಿಡಿಯಿರಿ.

(1) 50000

(2) 40000

(3) 45000

(4) 60000

**74.** ಒಬ್ಬ ಮನುಷ್ಯ *P* ಸ್ಥಳದಿಂದ ಆರಂಭಿಸಿ 7 ಗಂಟೆಗಳಲ್ಲಿ *Q* ಸ್ಥಳವನ್ನು ತಲುಪುತ್ತಾನೆ. ಅವನು ಗಂಟೆಗೆ 10 ಕಿ.ಮೀ.ನಂತೆ $\frac{1}{4}$ (ನಾಲ್ಕನೇ ಒಂದರಷ್ಟು) ದೂರವನ್ನು ಮತ್ತು ಗಂಟೆಗೆ 12 ಕಿ.ಮೀ.ನಂತೆ ಉಳಿದ ದೂರವನ್ನು ಪ್ರಯಾಣಿಸಿದ್ದಾನೆ. ಹಾಗಾದರೆ *P* ಮತ್ತು *Q* ನಡುವಿನ ದೂರವೆಷ್ಟು?

(1) 72 ಕಿ.ಮೀ.

(2) 90 ಕಿ.ಮೀ.

(3) 80 ಕಿ.ಮೀ.

(4) 70 ಕಿ.ಮೀ.

**75.** ಒಂದು ಅಂಶದಿಂದ 1ನ್ನು ಕಳೆದಾಗ ಭಿನ್ನರಾಶಿ $\frac{1}{3}$ ಆಗುತ್ತದೆ ಮತ್ತು ಅದರ ಛೇದಕ್ಕೆ 8ನ್ನು ಸೇರಿಸಿದಾಗ ಅದು $\frac{1}{4}$ ಆಗುತ್ತದೆ. ಹಾಗಾದರೆ ಪಡೆದ ಭಿನ್ನರಾಶಿಯು

(1) $\frac{3}{12}$

(2) $\frac{4}{12}$

(3) $\frac{5}{12}$

(4) $\frac{7}{12}$

**76.** *A* ಮತ್ತು *B* ಎರಡು ಪೈಪ್‌ಗಳು ಅನುಕ್ರಮವಾಗಿ 15 ನಿಮಿಷಗಳು ಮತ್ತು 20 ನಿಮಿಷಗಳಲ್ಲಿ ಒಂದು ಟ್ಯಾಂಕನ್ನು ಭರ್ತಿ ಮಾಡುತ್ತವೆ. ಎರಡು ಪೈಪ್‌ಗಳನ್ನೂ ಒಟ್ಟಿಗೆ ತೆರೆಯಲಾಗಿದೆ ಆದರೆ 4 ನಿಮಿಷಗಳ ನಂತರ, *A* ಪೈಪ್ ಸ್ಥಗಿತಗೊಂಡಿದೆ. ಹಾಗಾದರೆ ಟ್ಯಾಂಕನ್ನು ಭರ್ತಿ ಮಾಡಲು ಒಟ್ಟು ಎಷ್ಟು ಸಮಯದ ಅಗತ್ಯವಿದೆ?

(1) 10 ನಿಮಿಷ, 20 ಸೆಕೆಂಡ್‌ಗಳು

(2) 11 ನಿಮಿಷ, 45 ಸೆಕೆಂಡ್‌ಗಳು

(3) 12 ನಿಮಿಷ, 30 ಸೆಕೆಂಡ್‌ಗಳು

(4) 14 ನಿಮಿಷ, 40 ಸೆಕೆಂಡ್‌ಗಳು

Visit to Karnataka Help.in

**77.** ಇತ್ತೀಚೆಗೆ ಸುದ್ದಿಯಲ್ಲಿರುವ GSAT 20 ಉಪಗ್ರಹದ ಪ್ರಾಥಮಿಕ ಉದ್ದೇಶವೇನು?

(1) ಭೂಮಿಯ ವೀಕ್ಷಣೆ

(2) ಸಂವಹನ

(3) ಹವಾಮಾನ ಮೇಲ್ವಿಚಾರಣೆ

(4) ನೇವಿಗೇಷನ್

**78.** ಈ ಕೆಳಗಿನ ಯಾವ ದೇಶವು ಸಾರ್ಕ್‌ನ ಸದಸ್ಯತ್ವ ಹೊಂದಿಲ್ಲ?

(1) ನೇಪಾಳ

(2) ಮಾಲ್ಡೀವ್ಸ್

(3) ಚೀನಾ

(4) ಅಫ್ಘಾನಿಸ್ತಾನ

**79.** 2024ರ ಪ್ಯಾರಿಸ್ ಒಲಿಂಪಿಕ್ಸ್‌ಗೆ ಟಾರ್ಚ್‌ಬೇರರ್ ಆಗಿ ಯಾರು ಆಯ್ಕೆಯಾಗಿದ್ದಾರೆ?

(1) ಸೈನಾ ನೆಹ್ವಾಲ್

(2) ನೀರಜ್ ಚೋಪ್ರಾ

(3) ಅಭಿನವ್ ಬಿಂದ್ರಾ

(4) ಪಿ.ವಿ. ಸಿಂಧು

**80.** ಮಹಿಳಾ FGM 2024ರ ಅಂತರರಾಷ್ಟ್ರೀಯ ಶೂನ್ಯ ಸಹಿಷ್ಣುತೆಯ ದಿನದ ಥೀಮ್ ಏನು?

(1) ಯುವ ಶಕ್ತಿಯನ್ನು ಅನಾವರಣಗೊಳಿಸುವುದು

(2) FGMಅನ್ನು ತೆಗೆದುಹಾಕುವ ಮೂಲಕ ಹೊಸ ಜಾಗತಿಕ ಗುರಿಗಳನ್ನು ಸಾಧಿಸುವುದು

(3) ಅವಳ ಧ್ವನಿ, ಅವಳ ಭವಿಷ್ಯ

(4) ಯುನೈಟ್, ಫಂಡ್ ಮತ್ತು ಆ್ಯಕ್ಟ್

**81.** ತಪ್ಪು ಗುಂಪಿನ ರಕ್ತವನ್ನು ಪಡೆದ ವ್ಯಕ್ತಿಯಲ್ಲಿ ಯಾವ ಪರಿಣಾಮ ಉಂಟಾಗುತ್ತದೆ?

(1) ಎಲ್ಲ ಅಪಧಮನಿಗಳು ವ್ಯಾಕೋಚನ ಗೊಳ್ಳುತ್ತವೆ

(2) ಎಲ್ಲ ಅಪಧಮನಿಗಳು ಸಂಕುಚನಗೊಳ್ಳುತ್ತವೆ

(3) ಕೆಂಪು ರಕ್ತಕಣಗಳು ಒಟ್ಟುಗೂಡುತ್ತವೆ

(4) ಗುಲ್ಮ ಮತ್ತು ದುಗ್ಧರಸ ಗ್ರಂಥಿಗಳು ಹದಗೆಡುತ್ತವೆ

**82.** 'ರೆಪೋ ದರ' ಪದವು ಇದನ್ನು ಉಲ್ಲೇಖಿಸುತ್ತದೆ

(1) ಭಾರತೀಯ ರಿಸರ್ವ್ ಬ್ಯಾಂಕ್ (RBI) ವಾಣಿಜ್ಯ ಬ್ಯಾಂಕುಗಳಿಗೆ ನೀಡುವ ಸಾಲದ ಹಣದ ದರ

(2) ವಾಣಿಜ್ಯ ಬ್ಯಾಂಕುಗಳು ಸಾರ್ವಜನಿಕರಿಗೆ ನೀಡುವ ಹಣದ ದರ

(3) ಉಳಿತಾಯ ಖಾತೆಗಳ ಮೇಲಿನ ಬಡ್ಡಿ ದರ

(4) ಸರ್ಕಾರಿ ಬಾಂಡ್‌ಗಳ ಮೇಲಿನ ಆದಾಯದ ದರ

**Visit to Karnataka Help.in**

**83.** ಯಾವ ಜಲವಿದ್ಯುತ್ ಯೋಜನೆಗೆ 'ಕೆ. ಶೇಷಾದ್ರಿ ಅಯ್ಯರ್ ಜಲವಿದ್ಯುತ್ ಸ್ಥಾವರ' ಎಂದು ಹೆಸರಿಡಲಾಗಿದೆ?

(1) ಶಿವನಸಮುದ್ರ ಜಲವಿದ್ಯುತ್ ಯೋಜನೆ

(2) ಕಾಳಿ ಜಲವಿದ್ಯುತ್ ಯೋಜನೆ

(3) ಶರಾವತಿ ಜಲವಿದ್ಯುತ್ ಯೋಜನೆ

(4) ಮೇಲಿನ ಯಾವುದೂ ಅಲ್ಲ

**84.** ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

(A) ಸ್ಥಾವರ ಮತ್ತು ಯಂತ್ರೋಪಕರಣಗಳಲ್ಲಿ 25 ಲಕ್ಷ ರೂಪಾಯಿಗಳಿಗಿಂತ ಕಡಿಮೆ ಬಂಡವಾಳ ಹೂಡಿಕೆ ಹೊಂದಿರುವ ಕೈಗಾರಿಕೆಗಳನ್ನು ಅತಿ ಚಿಕ್ಕ ಕೈಗಾರಿಕೆಗಳು ಎಂದು ವ್ಯಾಖ್ಯಾನಿಸಲಾಗಿದೆ.

(B) ಸ್ಥಾವರ ಮತ್ತು ಯಂತ್ರೋಪಕರಣಗಳಲ್ಲಿ ಒಂದು ಕೋಟಿ ರೂ.ಗಳನ್ನು ಮೀರದ ಬಂಡವಾಳ ಹೂಡಿಕೆ ಹೊಂದಿರುವ ಕೈಗಾರಿಕೆಗಳನ್ನು ಸಣ್ಣ ಪ್ರಮಾಣದ ಕೈಗಾರಿಕೆ ಎಂದು ಪರಿಗಣಿಸಲಾಗಿದೆ.

ಕೆಳಗೆ ನೀಡಿರುವ ಆಯ್ಕೆಗಳಿಂದ **ಸರಿಯಾದ** ಉತ್ತರವನ್ನು ಆರಿಸಿ :

(1) ಕೇವಲ (A) ಹೇಳಿಕೆ ಮಾತ್ರ ಸರಿಯಾಗಿದೆ

(2) ಕೇವಲ (B) ಹೇಳಿಕೆ ಮಾತ್ರ ಸರಿಯಾಗಿದೆ

(3) (A) ಮತ್ತು (B) ಎರಡು ಹೇಳಿಕೆಗಳೂ ಸರಿಯಾಗಿವೆ

(4) ಮೇಲಿನ ಯಾವುದೂ ಅಲ್ಲ

**85.** ***ಪಟ್ಟಿ—I*** ನ್ನು ***ಪಟ್ಟಿ—II*** ರೊಂದಿಗೆ ಹೊಂದಿಸಿ:

| ***ಪಟ್ಟಿ—I*** | ***ಪಟ್ಟಿ—II*** |
|---|---|
| A. ಭದ್ರಾ ವನ್ಯಜೀವಿ ಅಭಯಾರಣ್ಯ | I. ಮೈಸೂರು ಜಿಲ್ಲೆ |
| B. ನುಗು ವನ್ಯಜೀವಿ ಅಭಯಾರಣ್ಯ | II. ಕೊಡಗು ಜಿಲ್ಲೆ |
| C. ಪುಷ್ಪಗಿರಿ ವನ್ಯಜೀವಿ ಅಭಯಾರಣ್ಯ | III. ಶಿವಮೊಗ್ಗ ಜಿಲ್ಲೆ |
| D. ಬಂಡೀಪುರ ವನ್ಯಜೀವಿ ರಾಷ್ಟ್ರೀಯ ಉದ್ಯಾನವನ | IV. ಚಾಮರಾಜನಗರ ಜಿಲ್ಲೆ |

ಕೆಳಗೆ ನೀಡಿರುವ ಆಯ್ಕೆಗಳಿಂದ **ಸರಿಯಾದ** ಉತ್ತರವನ್ನು ಆರಿಸಿ :

| | A | B | C | D |
|---|---|---|---|---|
| (1) | III | I | II | IV |
| (2) | I | II | III | IV |
| (3) | IV | III | II | I |
| (4) | I | III | IV | II |

**86.** ಬೇಡ್ತಿ ನದಿಯ ಇನ್ನೊಂದು ಹೆಸರು

(1) ಲೋಕಪಾವನಿ

(2) ವರದಾ

(3) ಗಂಗಾವಳಿ

(4) ಮೇಲಿನ ಯಾವುದೂ ಅಲ್ಲ

Visit to Karnataka Help.in

**87.** ಕೆಳಗೆ ನೀಡಿದವುಗಳು ಎರಡು ಹೇಳಿಕೆಗಳಾಗಿದ್ದು, ಒಂದನ್ನು **ಸಮರ್ಥನೆ (A)** ಎಂದೂ, ಮತ್ತೊಂದನ್ನು **ಕಾರಣ (R)** ಎಂದೂ ಗುರುತಿಸಲಾಗಿದೆ. ಈ ಕೆಳಗೆ ನೀಡಿರುವ ಆಯ್ಕೆಗಳಿಂದ ನಿಮ್ಮ ಉತ್ತರವನ್ನು ಆಯ್ಕೆಮಾಡಿ :

**ಸಮರ್ಥನೆ (A) :** ಸಮಭಾಜಕ ವೃತ್ತದ 5° ಉತ್ತರ ಮತ್ತು 5° ದಕ್ಷಿಣ ಅಕ್ಷಾಂಶದ ಒಳಭಾಗದಲ್ಲಿ ಕಂಡುಬರುವ ಪ್ರದೇಶಗಳು ವರ್ಷವಿಡೀ ಮಳೆಯನ್ನು ಪಡೆಯುತ್ತವೆ.

**ಕಾರಣ (R) :** ಈ ಪ್ರದೇಶಗಳಲ್ಲಿ ಹೆಚ್ಚಿನ ಉಷ್ಣಾಂಶ ಮತ್ತು ಕಡಿಮೆ ತೇವಾಂಶದಿಂದಾಗಿ ಸಂಜೆಯ ಸಮಯದಲ್ಲಿ ಪರಿಸರಣ ಮಳೆ (convectional rain) ಬೀಳಲು ಕಾರಣವಾಗುತ್ತದೆ.

(1) **ಸಮರ್ಥನೆ (A)** ಮತ್ತು **ಕಾರಣ (R)** ಎರಡೂ ಸರಿಯಾಗಿವೆ ಮತ್ತು **ಸಮರ್ಥನೆ (A)**ಗೆ **ಕಾರಣ (R)** ಸರಿಯಾದ ವಿವರಣೆಯಾಗಿದೆ.

(2) **ಸಮರ್ಥನೆ (A)** ಮತ್ತು **ಕಾರಣ (R)** ಎರಡೂ ಸರಿಯಾಗಿವೆ ಆದರೆ **ಸಮರ್ಥನೆ (A)**ಗೆ **ಕಾರಣ (R)** ಸರಿಯಾದ ವಿವರಣೆಯಲ್ಲ.

(3) **ಸಮರ್ಥನೆ (A)** ಸರಿಯಾಗಿದೆ ಆದರೆ **ಕಾರಣ (R)** ತಪ್ಪಾಗಿದೆ.

(4) **ಸಮರ್ಥನೆ (A)** ತಪ್ಪಾಗಿದೆ ಆದರೆ **ಕಾರಣ (R)** ಸರಿಯಾಗಿದೆ.

**88.** ಟೆಕ್ಟೋನಿಕ್ ಭೂಕಂಪಗಳಿಗೆ ಕಾರಣವೇನು?

(1) ಭೂ ಮಡಿಕೆ ಮತ್ತು ಸ್ತರಭಂಗಗಳು

(2) ಜ್ವಾಲಾಮುಖಿಗಳ ಕಾರ್ಯಾಚರಣೆ

(3) ಭೂ ಅಂತರ್ಗತ ಗುಹೆಗಳ ಕುಸಿತ

(4) ಗಣಿಗಾರಿಕೆ ಚಟುವಟಿಕೆಗಳು

**89.** ಕೆಳಗೆ ನೀಡಿದವುಗಳು ಎರಡು ಹೇಳಿಕೆಗಳಾಗಿದ್ದು, ಒಂದನ್ನು **ಸಮರ್ಥನೆ (A)** ಎಂದೂ, ಮತ್ತೊಂದನ್ನು **ಕಾರಣ (R)** ಎಂದೂ ಗುರುತಿಸಲಾಗಿದೆ. ಈ ಕೆಳಗೆ ನೀಡಿರುವ ಆಯ್ಕೆಗಳಿಂದ ನಿಮ್ಮ ಉತ್ತರವನ್ನು ಆಯ್ಕೆಮಾಡಿ :

**ಸಮರ್ಥನೆ (A) :** ಉತ್ತರ ಧ್ರುವ ಪ್ರದೇಶದಲ್ಲಿ ಪ್ರಪಂಚದಲ್ಲೇ ಅತ್ಯಂತ ಕಡಿಮೆ ಉಷ್ಣಾಂಶ ದಾಖಲಾಗಿದೆ.

**ಕಾರಣ (R) :** ಉತ್ತರ ಧ್ರುವ ಪ್ರದೇಶವು ಆರ್ಕ್ಟಿಕ್ ಮಹಾಸಾಗರದಿಂದ ಆವೃತವಾಗಿದೆ.

(1) **ಸಮರ್ಥನೆ (A)** ಮತ್ತು **ಕಾರಣ (R)** ಎರಡೂ ಸರಿಯಾಗಿವೆ ಮತ್ತು **ಸಮರ್ಥನೆ (A)**ಗೆ **ಕಾರಣ (R)** ಸರಿಯಾದ ವಿವರಣೆಯಾಗಿದೆ.

(2) **ಸಮರ್ಥನೆ (A)** ಮತ್ತು **ಕಾರಣ (R)** ಎರಡೂ ಸರಿಯಾಗಿವೆ ಆದರೆ **ಸಮರ್ಥನೆ (A)**ಗೆ **ಕಾರಣ (R)** ಸರಿಯಾದ ವಿವರಣೆಯಲ್ಲ.

(3) **ಸಮರ್ಥನೆ (A)** ಸರಿಯಾಗಿದೆ ಆದರೆ **ಕಾರಣ (R)** ತಪ್ಪಾಗಿದೆ.

(4) **ಸಮರ್ಥನೆ (A)** ತಪ್ಪಾಗಿದೆ ಆದರೆ **ಕಾರಣ (R)** ಸರಿಯಾಗಿದೆ.

Visit to Karnataka Help.in



**90.** ಈ ಕೆಳಗಿನವು ವಿಟಮಿನ್ A ಕೊರತೆಯ ಲಕ್ಷಣಗಳು

(A) ಕೆರಟೋಮಲೇಸಿಯಾ

(B) ಫಾಲಿಕ್ಯುಲರ್ ಹೈಪರ್‌ಕೆರಟೋಸಿಸ್

(C) ಬಂಜೆತನ

(D) ಆಸ್ಟಿಯೋಮಲೇಸಿಯಾ

ಕೆಳಗೆ ನೀಡಿರುವ ಆಯ್ಕೆಗಳಿಂದ **ಸರಿಯಾದ** ಉತ್ತರವನ್ನು ಆರಿಸಿ :

(1) (A), (B) ಮತ್ತು (C) ಸರಿಯಾಗಿವೆ

(2) (B), (C) ಮತ್ತು (D) ಸರಿಯಾಗಿವೆ

(3) (A), (C) ಮತ್ತು (D) ಸರಿಯಾಗಿವೆ

(4) (A), (B) ಮತ್ತು (D) ಸರಿಯಾಗಿವೆ

**91.** ಉತ್ತರ ಅಟ್ಲಾಂಟಿಕ್ ಸಾಗರಕ್ಕೆ ಸಂಬಂಧಿಸದಿರುವ ಸಾಗರ ಪ್ರವಾಹವನ್ನು ಗುರುತಿಸಿ :

(1) ಫಾಕ್‌ಲ್ಯಾಂಡ್

(2) ಕ್ಯಾನರಿ

(3) ಇರ್ಮಿಂಗರ್

(4) ಲ್ಯಾಬ್ರಡಾರ್

**92.** ಜನಸಂಖ್ಯಾಆವರ್ತನ ಎಂದರೆ

(1) ಸಮಾಜದಲ್ಲಿ ಯುವ ಜನಸಂಖ್ಯೆಯ ಬದಲಾವಣೆಯ ಪ್ರಕ್ರಿಯೆ

(2) ನಿರ್ದಿಷ್ಟ ಸಮಾಜದಲ್ಲಿ ಜನಸಂಖ್ಯೆಯ ಬದಲಾವಣೆಯ ಪ್ರಕ್ರಿಯೆ

(3) ಮರಣ ದರ ಮತ್ತು ವಲಸೆಯನ್ನು ಪರಿಗಣಿಸುವ ಹಂತ

(4) ಜನನ ದರ ಮತ್ತು ಮರಣ ದರವನ್ನು ಪರಿಗಣಿಸುವ ಹಂತ

**93.** "ಮಾನವನ ಅಗತ್ಯತೆ ಮತ್ತು ಅವಶ್ಯಕತೆ ಪ್ರಬಲವಾಗಿದ್ದರೆ ಪರಿಸರದಿಂದ ಯಾವುದೇ ಅಡೆತಡೆ ಉಂಟಾದರೂ ಅವನ ಆರ್ಥಿಕ ಚಟುವಟಿಕೆಗಳು ನಿಲ್ಲುವುದಿಲ್ಲ" ಎಂಬುವುದಕ್ಕೆ ಈ ಕೆಳಗಿನ ಯಾವುದು ಉತ್ತಮ ಉದಾಹರಣೆಯಾಗಿದೆ?

(1) ಗಂಗಾ ಮತ್ತು ಬ್ರಹ್ಮಪುತ್ರ ನದಿಗಳ ಮುಖಜ ಭೂಮಿ ಪ್ರದೇಶಗಳಲ್ಲಿ ಸೆಣಬಿನ ಕೃಷಿ

(2) ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿ ಮೆಕ್ಕೆ ಜೋಳದ ಕೃಷಿ

(3) ಆಸ್ಟ್ರೇಲಿಯಾದಲ್ಲಿ ಚಿನ್ನದ ಗಣಿಗಾರಿಕೆ

(4) ಮೆಡಿಟರೇನಿಯನ್ ಪ್ರದೇಶದಲ್ಲಿ ದ್ರಾಕ್ಷಾರಸ ತಯಾರಿಕೆ

**94.** ಭಾರತದ ಬಂದರುಗಳನ್ನು ಕುರಿತು ಈ ಕೆಳಗಿನ ಯಾವ ಹೇಳಿಕೆ **ಸರಿಯಾಗಿದೆ**?

(1) ಕಲ್ಕತ್ತಾ ಒಂದು ನದೀ ನಿರ್ಮಿತ ಬಂದರು

(2) ವಿಶಾಖಪಟ್ಟಣವು ಉಬ್ಬರವಿಳಿತದ ಬಂದರು

(3) ಟ್ಯುಟಿಕೋರಿನ್ ಬಂದರು ಆಂಧ್ರಪ್ರದೇಶ ಮತ್ತು ತಮಿಳುನಾಡು ನಡುವೆ ಇದೆ

(4) ಮುಂದ್ರಾ ಬಂದರು ಮಹಾರಾಷ್ಟ್ರದಲ್ಲಿದೆ

**95.** ಕೆಳಗಿನವುಗಳಲ್ಲಿ ಯಾವುದು ಗಂಗಾ ನದಿಯ ಉಪನದಿಯಾಗಿದೆ?

(1) ಯಮುನಾ

(2) ಹೂಗ್ಲಿ

(3) ಕೋಸಿ

(4) ಗಂಡಕ್

Visit to Karnataka Help.in

**96.** ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ ಮತ್ತು ಕೆಳಗೆ ನೀಡಲಾದ **ಸರಿಯಾದ** ಸಂಕೇತಗಳನ್ನು ಆಯ್ಕೆ ಮಾಡಿ:

(A) ನಿತ್ಯ ಹರಿದ್ವರ್ಣ ಕಾಡುಗಳು ಪಶ್ಚಿಮ ಘಟ್ಟಗಳ ಪೂರ್ವ ಭಾಗದಲ್ಲಿ ಕಂಡುಬರುತ್ತವೆ.

(B) ಉಷ್ಣವಲಯದ ಎಲೆ ಉದುರುವ ಕಾಡುಗಳು ವಾರ್ಷಿಕವಾಗಿ 100ರಿಂದ 200 ಸೆಂ.ಮೀ. ಮಳೆ ಬೀಳುವ ಪ್ರದೇಶಗಳಲ್ಲಿ ಕಂಡುಬರುತ್ತವೆ.

(C) ಮ್ಯಾಂಗ್ರೋವ್ ಕಾಡುಗಳು ಭಾರತದ ಪಶ್ಚಿಮ ಮತ್ತು ಪೂರ್ವ ಕರಾವಳಿಯಲ್ಲಿ ಕಂಡುಬರುತ್ತವೆ.

(D) ಹಿಮಾಲಯ ಪರ್ವತ ಪ್ರದೇಶಕ್ಕೆ ಹೋಲಿಸಿದರೆ, ಪರ್ಯಾಯ ಪ್ರಸ್ಥಭೂಮಿ ಪ್ರದೇಶವು ಹೆಚ್ಚು ಖನಿಜ ಸಂಪನ್ಮೂಲಗಳನ್ನು ಹೊಂದಿದೆ.

(1) (A), (B) ಮತ್ತು (C) ಸರಿಯಾಗಿವೆ

(2) (B), (C) ಮತ್ತು (D) ಸರಿಯಾಗಿವೆ

(3) (A), (B) ಮತ್ತು (D) ಸರಿಯಾಗಿವೆ

(4) (A), (B), (C) ಮತ್ತು (D) ಸರಿಯಾಗಿವೆ

**97.** ಕರ್ನಾಟಕ ರಾಜ್ಯವು ತನ್ನ ಗಡಿಯನ್ನು ಎಷ್ಟು ರಾಜ್ಯಗಳೊಂದಿಗೆ ಹಂಚಿಕೊಂಡಿದೆ?

(1) 4

(2) 5

(3) 6

(4) 7

**98.** ಕರ್ಕಾಟಕ ಸಂಕ್ರಾಂತಿ ವೃತ್ತವು ಭಾರತದ ಈ ಕೆಳಕಂ ಯಾವ ರಾಜ್ಯಗಳ ಮೂಲ **ಹಾದುಹೋಗುವುದಿಲ್ಲ?**

(1) ಮಧ್ಯಪ್ರದೇಶ

(2) ಪಶ್ಚಿಮ ಬಂಗಾಳ

(3) ರಾಜಸ್ಥಾನ

(4) ಒಡಿಶಾ

**99.** ಈ ಕೆಳಗಿನ ಯಾವ ಹೇಳಿಕೆಯು **ತಪ್ಪಾಗಿದೆ?**

(1) ರಾಜಸ್ಥಾನವು ಅತಿ ಹೆಚ್ಚು ಕಚ್ಚಾ ತೈ ಉತ್ಪಾದಿಸುವ ರಾಜ್ಯವಾಗಿದೆ.

(2) ಒಡಿಶಾ ರಾಜ್ಯವು ಕಚ್ಚಾ ತೈಲ ಉತ್ಪಾದಿಸುವ ಯಾವ ಸ್ಥಳಗಳನ್ನೂ ಹೊಂದಿಲ್ಲ.

(3) ಸಾಗರ್ ಸಾಮ್ರಾಟ್ ಎಂಬುದು ಬಾಂಬೆ ಹೈ ನಲ್ಲಿರುವ ಕಚ್ಚಾ ತೈಲವನ್ನು ಹೊರತೆಗೆಯುವ ವೇದಿಕೆಯಾಗಿದೆ.

(4) ಅಸ್ಸಾಂ ಕಚ್ಚಾ ತೈಲ ಉತ್ಪಾದಿಸುವ ಅತ್ಯಂತ ಹಳೆಯ ರಾಜ್ಯವಾಗಿದೆ.

**100.** ಪ್ರತಿ ವರ್ಷ ಜುಲೈ 11ನೇ ದಿನಾಂಕವನ್ನು ಏನೆಂದು ಆಚರಿಸಲಾಗುತ್ತದೆ?

(1) ವಿಶ್ವ ಪರಿಸರ ದಿನ

(2) ವಿಶ್ವ ವನ್ಯಜೀವಿ ದಿನ

(3) ವಿಶ್ವ ಅರಣ್ಯ ದಿನ

(4) ವಿಶ್ವ ಜನಸಂಖ್ಯಾ ದಿನ